# ಮಾನಸ ಗಂಗೋತ್ರಿ

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

**ಅಸ್ಪೃಶ್ಯತೆ ಮನುಷ್ಯ ಕುಲವೇ ನಾಚಿಕೆ ಪಡುವಂತ ಸಂಗತಿ** 2

**ಅಮ್ಮ..** 3

**ಪ್ರಸ್ತುತ ಶಿಕ್ಷಣ, ಮಾಧ್ಯಮ, ರಾಜಕೀಯ ಮಾರಾಟದ ವಸ್ತುವಾಗಿದೆ ...** 4

## ವಿಕಲ ಚೇತನರ ಆಶಾಕಿರಣ ಜಿಲ್ಲಾ ಪುನರ್ವಸತಿ ಕೇಂದ್ರ

ದೇಶದ ಜನ ಸಂಖ್ಯೆಯ ಶೇಕ 10 ರಷ್ಟು ಜನರು ಒಂದಲ್ಲಾ ಒಂದು ರೀತಿಯ ವಿಕಲತೆಯಿಂದ ನರಳುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ.

ಆದರೆ ನಮ್ಮ ದೇಶದ 120 ಕೋಟಿ ಜನಸಂಖ್ಯೆಯಲ್ಲಿ ಸು ಮಾರು 12ಕೋಟಿ ಜನರು ವಿಕಲಚೇತನರಾಗಿದ್ದು,ಈ ಪೈಕಿ ಶೇಕಡಾ 17.ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅದರಲ್ಲಿ ಶೇಕಡಾ 5 ರಷ್ಟು ಮಂದಿಗೆ ಮಾತ್ರ ಯಾವುದಾದರೂ, ಪುನರ್ವಸತಿ ಸೌಲಭ್ಯ ಲಭ್ಯವಾಗುತ್ತಿದೆ.

ಸರ್ಕಾರಿ ಅಥವಾ ಸರ್ಕಾರೇತರ ಪುನರ್ವಸತಿ ಕಾರ್ಯಕ್ರಮಗಳು ನಗರ ಪ್ರದೇಶದಲ್ಲಿ ಕೇಂದ್ರೀಕೃತವಾಗಿರುವುದು ಹಾಗೂ ಪುನರ್ವಸತಿ ಸೌಲಭ್ಯಗಳ ಬಗ್ಗೆ ಗ್ರಾಮೀಣ ಪ್ರದೇಶದ ಜನರಿಗೆ ಅರಿವಿಲ್ಲದಿರುವುದು, ಈ ಪರಿಸ್ಥಿತಿಗೆ ಕಾರಣವಾಗಿದೆ. ಈ ಹಿನ್ನಲೆಯಲ್ಲಿ ಹಾಲಿ ನಿರ್ವಹಿಸುತ್ತಿರುವ ಜಿಲ್ಲಾ ಪುನರ್ವಸತಿ ಕೇಂದ್ರ ಗ್ರಾಮೀಣ ವಿಕಲಚೇತ ಹಾಗೂ ನಗರ ವಿಕಲಚೇತನ ವ್ಯಕ್ತಿಗಳ ಪುನರ್ವಸತಿ ಕ್ಷೇತ್ರದಲ್ಲಿ ಮಹತ್ವದ ಪಾತ್ರವಹಿಸುತ್ತಿದೆ.

ವಿಕಲ ಚೇತನರು ಇಂದರೆ ಯಾರು? ದೈಹಿಕ ನ್ಯೂನ್ಯತೆಯುಳ್ಳ, ದೃಷ್ಟಿ ದೋಷವುಳ್ಳ, ಶ್ರವಣ ದೋಷವುಳ್ಳ ವ್ಯಕ್ತಿಗಳು, ಬುದ್ಧಿಮಾನ್ಯರು, ಕುಷ್ಟರೋಗ ನಿವಾ–



ರಿತ ವಿಕಲಚೇತನ ವ್ಯಕ್ತಿಗಳು, ಮಾನಸಿಕ ಅಸ್ವಸ್ಥರು, ಬಹುವಿಧದ ನ್ಯೂನ್ಯತೆಯುಳ್ಳ ವ್ಯಕ್ತಿಗಳು ವಿಕಲಚೇತನರು ಎನ್ನಲಾಗುತ್ತದೆ. ಈ ವ್ಯಕ್ತಿಗಳು ಹುಟ್ಟಿನಿಂದ ಅಥವಾ ಕೆಲವು ಅವಗಢಗಳಿಂದ ವಿಕಲ ಚೇತನರಾಗಿರುತ್ತಾರೆ. ಸಮಾಜವು ಇವರನ್ನು ಮೂರನೇ ವರ್ಗದ ವ್ಯಕ್ತಿ ನಾಗ–ರೀಕರೆಂದು, ಯಾವುದೇ ಕೆಲಸಕ್ಕೆ ಬಾರದವರೆಂದು, ಪರಿಗಣಿಸಿತ್ತು. ಅಂಗಾಗಗಳ ಕೊರತೆಯಿಂದಾಗಿ ಉಂಟಾಗಿದ್ದ ವಿಕಲತೆಯಿಂದಾಗಿ ಇವರುಗಳು ಸಮಾಜದಿಂದ ತಿರಸ್ಕೃತಗೊಂಡು, ಕೆಲವರು ಕರುಣೆ, ದಯೆಯಿಂದ ನೋಡಿದರೆ ಮತ್ತೆ ಕೆಲವರು ತಾತ್ಸರದಿಂದ ಸಮಾಜದ ಕೆಳಸ್ಥರದಲ್ಲಿ ನೆಡೆಸಿಕೊಳ್ಳುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ, ಅಂಗವಿಕಲ ಎಂಬ ಹೆಸರಿಗೆ ಬದಲಾಗಿ 'ವಿಕಲಚೇತನ'ರು ಎಂಬ ಪದ ಬಳಸುವುದರ ಮೂಲಕ ಅವರಲ್ಲಿ ಧನಾತ್ಮಕ ಮನೋಭಾವನೆಯನ್ನೂ, ಸಾತ್ವನ ಕೇಂದ್ರಗಳ ಮೂಲಕ ದೈಹಿಕ ಹಾಗೂ ಮಾನಸಿಕ ಚೈತನ್ಯತುಂಬುವ ಕೆಲಸ ಮಾಡಲಾಗಿದೆ.

**–ರಾಕೇಶ್**

## ಜಿಲ್ಲಾ ಮಟ್ಟದ ಪದವಿ ಪೂರ್ವ ಕ್ರೀಡಾಕೂಟದಲಿ ಮಹಾರಾಜ ಮತ್ತು ಮರಿಮಲ್ಲಪ್ಪ ಕಾಲೇಜುಗೆ ಸಮಗ್ರ ಪ್ರಶಸ್ತಿ.

ಗುರುವಾರ ಆಯೋಜಿಸಿದ್ದ ಜಿಲ್ಲಾಮಟ್ಟದ ಪದವಿ ಪೂರ್ವಕಾಲೇಜು ಬಾಲಕರ ಖೋ ಖೋ ಪಂದ್ಯಾವಳಿಯ ರೋಚಕ ಕ್ಷಣ.

ಮೈಸೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕ್ರೀಡಾ ಕೂಟದಲ್ಲಿ ಮಹಾರಾಜ ಮತ್ತು ಮರಿಮಲ್ಲಪ್ಪ ತಂಡಗಳು ಕ್ರಮವಾಗಿ ಖೋಖೋ ಜಿಲ್ಲಾ ಮಟ್ಟದ ಪಂದ್ಯದಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದವು.

ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಮ–ರಿಮಲ್ಲಪ್ಪ ಪದವಿಪೂರ್ವ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ಆವರಣದಲ್ಲಿ ಗುರುವಾರ ಆಯೋಜಿಸಿದ ಖೋಖೋ ಪಂದ್ಯವಳಿಯ ಪುರುಷರ ವಿಭಾಗದಫೈನಲ್‌ನಲ್ಲಿ ಮಹಾರಾಜ ಕಾಲೇಜು ತಂಡ 2–1 ಅಂಕಗಳಿಂದ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ವಿರುದ್ಧ ಜಯ ಪಡೆಯಿತು.

ಮಹಿಳೆಯರ ವಿಭಾಗದಲ್ಲಿ ಮರಿಮಲ್ಲಪ್ಪ ಕಾಲೇಜು ತಂಡ 2–0 ಅಂಕಗಳಿಂದ ಸರಸ್ವತಿಪುರಂನ ಜೆಎಸ್‌ಎಸ್ ಕಾಲೇಜು ವಿರುದ್ಧಜಯ ದಾಖಲಿಸಿತು. ಖೋಖೋ ಪುರುಷರ ವಿಭಾಗದ ಫೈನಲ್‌ನಲ್ಲಿ ಮೈಸೂರು ತಾಲೂಕು ತಂಡ 16–9 ಅಂಕಗಳಿಂದ ಪಿರಿಯ ಪಟ್ಟಣ ತಾಲೂಕು ವಿರುದ್ಧಜಯ ದಾಖಲಿಸಿತು.

ಮಹಿಳೆಯರ ವಿಭಾಗದಲ್ಲಿ ಟಿ.ನರಸಿಪುರ ತಾಲೂಕು ತಂಡ 20–01 ಅಂಕಗಳಿಂದ ಮೈಸೂರು ತಾಲೂಕು ವಿರುದ್ಧಜಯ ಪಡೆಯಿತು.

ಪುರುಷರ ಬಾಲ್ ಬ್ಯಾಡ್ಮಿಂಟನ್ ಫೈನಲ್ ಪಂದ್ಯದಲ್ಲಿ



ಮೈಸೂರು ತಾಲೂಕು ತಂಡ 2–0 ಸೆಟ್ ಗಳಿಂದ ಪಿರಿಯಪಟ್ಟಣ ತಾಲೂಕು ವಿರುದ್ಧ ಗೆಲವು ದಾಖಲಿಸಿದರೆ, ಮಹಿಳೆಯರ ವಿಭಾಗದ ಫೈನಲ್ ಪಂದ್ಯದಲ್ಲಿ ಹೆಚ್. ಡಿಕೋಟೆ ತಾಲೂಕು ತಂಡ 2–0 ಸೆಟ್ ಗಳಿಂದ ಪಿರಿಯಪಟ್ಟಣ ತಾಲೂಕು ವಿರುದ್ಧ ಗೆಲವು ದಾಖಲಿಸಿತು. ತಾಲೂಕು ವಿರುದ್ಧ ಗೆಲವು ದಾಖಲಿಸಿತು.

ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಗುರುವಾರ ಆಯೋಜಿಸಿದ ವೇಗದ ಓಟ ಸ್ವರ್ಧೆಯ ಬಾಲಕರ ವಿಭಾಗದಲ್ಲಿ 100 ಮೀ. ಓಟದ ಸ್ವರ್ಧೆಯಲ್ಲಿ ಶರವಣ್ 10.81 ಸೆಕೆಂಡ್‌ಗಳಲ್ಲಿ ಗುರಿತಲುಪಿ ಪ್ರಥಮ ಸ್ಥಾನ ಗಳಿಸಿದರು. ಕೆ.ಆರ್. ನಗರದ ಜಿ.ಆರ್.ರಾಹುಲ್ ದ್ವಿತೀಯ ಸ್ಥಾನ ಹಾಗೂ ಹೆಚ್.ಡಿ. ಕೋಟೆಯ ನವೀನ್ ಕಮಾರ್ ತೃತೀಯ ಸ್ಥಾನ ಗಳಿಸಿದರು.

ಬಾಲಕಿಯರ ವಿಭಾಗದ 100ಮೀ. ಓಟದ ಸ್ವರ್ಧೆಯಲ್ಲಿ ಬೃಂದಾ ಎಸ್. ಗೌಡ 12.53ಸೆಂ. ಗಳಲ್ಲಿ ಗುರಿ ಮುಟ್ಟಿ ಪ್ರಥಮ ಸ್ಥಾನವನ್ನು ಗಳಿಸಿದರು. ನಂಜನಗೂಡಿನಅಮೃತ ದ್ವಿತೀಯ ಹಾಗೂ ಮೈಸೂರಿನ ಶ್ಯಾರುನ್‌ತೃತೀಯ ಸ್ಥಾನಗಳಿಸಿದರು.

ಇದಕ್ಕೂ ಮುನ್ನ ಕ್ರೀಡಾಕೂಟಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀನಿವಾಸ್ ಪ್ರಸಾದ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು, ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ನಾಗರಾಜುಮೂರ್ತಿ, ಕ್ರೀಡಾಕೂಟದ ಸಂಚಾಲಕರಾದ ಕಾಂತರಾಜು ಹಾಗೂ ಮೃತ್ಯಂಜಯಪ್ಪ, ಮುಂತಾದವರು

**ರಾಜು. ಬಿ**

## ಡಾ.ರಾಜಕುಮಾರ್,ಜಿ.ಕೆ.ವೆಂಕಟೇಶ್ ಅವರ ನೆನಪಿಸಿದ ಗೀತೆಗಳು

ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದ ವೇದಿಕೆಯಲ್ಲಿ ಡಾ.ರಾಜ್ ಕುಮಾರ್ ಮತ್ತು ಜಿ.ಕೆ. ವೆಂಕಟೇಶ್ ಅವರ ಸುಮಧುರ ಹಳೇ ಗೀತೆಗಳ ಝೇಂಕಾರ, ಬಾಲಕಿಯ ಗಾಯನದ ಮೋಡಿಗೆ ನೆರೆದಿದ್ದ ಸಂಗೀತ ಪ್ರಿಯರು ಫೀದಾ.

ಹೌದು! ಇಂತಹ ಸಂಗೀತಕ್ಕೆ ವೇದಿಕೆಯಾಗಿದ್ದು ಜಗನ್ಮೋಹನ ಅರಮನೆ. 61ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಮಧುರಗಾನ ಕಲಾವೃಂದ ಏರ್ಪಡಿಸಿದ್ದ ವರನಟ 'ಡಾ.ರಾಜ್‌ಕುಮಾರ್ ಮತ್ತು ಜಿ.ಕೆ.ವೆಂಕಟೇಶ್' ಎರಡು ನಕ್ಷತ್ರಗಳ ರಸಸಂಜೆ ಕಾರ್ಯಕ್ರಮದಲ್ಲಿ ಗಾಯಕರ ಸುಮಧುರ ಕಂಠಸಿರಿಯಲ್ಲಿ ಹೊರಹೊಮ್ಮಿದ ಹಾಡುಗಳು ಮತ್ತು 4 ವರ್ಷದ ಬಾಲಕಿಯ ಗಾಯನದ ಮೋಡಿಗೆ ಅಕ್ಷರಶಃ ನೆರೆದಿದ್ದ ಡಾ.ರಾಜ್‌ಕುಮಾರ್ ಮತ್ತು ವೆಂಕಟೇಶ್ ಅಭಿಮಾನಿಗಳು ಗುನುಗುವಂತೆ ಮಾಡಿದವು.

ಮೊದಲಿಗೆ ವೇದಿಕೆ ಹಂಚಿಕೊಂಡ ಜೂನಿಯರ್ ರಾಜ್‌ಕುಮಾರ್ ಎಂದೇ ಪ್ರಸಿದ್ದಿ ಪಡೆದಿರುವ ರಮೇಶ್ ಕುಮಾರ್, ಡಾ.ರಾಜ್‌ಕುಮಾರ್ ಧ್ವನಿಯಲ್ಲಿ ಡೈಲಾಗ್ ಹೊಡೆದು, ಆನಂತರ ಓಹಿಲೇಶ್ವರ ಚಿತ್ರದ 'ಶರಣು ಶಂಭೋ', ಅನುರಾಗ ಅರಳಿತು ಚಿತ್ರದ 'ಶ್ರೀ ಕಂಠ ವಿಷಕಂಠ', ಚಲಿಸುವ ಮೋಡಗಳು ಚಿತ್ರದ 'ಜೇನಿನ ಹೊಳೆಯೋ ಹಾಲಿನ ಹೊಳೆಯೋ' ಹಾಡುವ ಮೂಲಕ ಪ್ರೇಕ್ಷಕರ ಮನ ಸೆಳೆದರು.

ನಂತರ ಗಾಯಕ ಸುಧಿ, ಬಂಗಾರದ ಮನುಷ್ಯ ಚಿತ್ರದ 'ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ', ಗಾಯಕಿ ಕೀರ್ತನಾ ಅವರು 'ಬಾಳ ಬಂಗಾರ ನೀನು ಗೀತೆಗಳನ್ನು ಹಾಡಿದರು.

**–ಶ್ರೇಯಸ್‌ದೇವನೂರ್**

## ಬಡ್ತಿ ಮೀಸಲಾತಿ ಉಳಿಸಿಕೊಳ್ಳಲು ಶ್ರಮಿಸಲಿ




ಬಡ್ತಿ ಮೀಸಲಾತಿಯನ್ನುದೇವರಾಜಅ–ರಸುಅವರು ನೀಡಿದ್ದರು. ಅದನ್ನುರಕ್ಷಿಸಬೇಕಾದ್ದುರಾಜ್ಯ ಸರ್ಕಾರದಕರ್ತವ್ಯವಾಗಿದೆ. ಸುಪ್ರೀಂಕೋರ್ಟಿನ ತೀರ್ಪನ್ನುರಾಜ್ಯ ಸರ್ಕಾರವು ಪ್ರಶ್ನಿಸಿ ಮೀಸಲಾತಿಯನ್ನು ಉಳಿಸಿಕೊಳ್ಳುವ ಗಂಭೀರ ಪ್ರಯತ್ನ ಮಾಡಬೇಕು ಕಾರ್ಯಕ್ರಮದಲ್ಲಿ ವಿವಿ ಸಿಂಡಿಕೇಟ್ ಸದಸ್ಯಎಂ. ಎಸ್.ಎಸ್‌ಕುಮಾರ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕಡಾ. ಪಿ ಕೃಷ್ಣಯ್ಯ, ವಿವಿ ಸ್ನಾತಕೋತ್ತರ ಕ್ರೀಡಾಮಂಡಳಿಯ ಅಧ್ಯಕ್ಷ ಪ್ರೊ.ಎಸ್‌ರವಿ, ದೈಹಿಕ ಶಿಕ್ಷಣ ವಿಭಾಗದಕ್ರಿಕೆಟ್‌ತರಬೇತುದಾರಡಾ. ಮನ್ಸೂರ್‌ಅಹಮದ್ ಸೇರಿದಂತೆ ಹಲವರು ಉಪಸ್ಥಿತರಿದ್ದರು

ಮೈಸೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನೀಡಿರುವ ಬಡ್ತಿ ಮೀಸಲಾತಿಯನ್ನು ಉಳಿಸಿಕೊಳ್ಳಲ ರಾಜ್ಯ ಸರ್ಕಾರಜವಾಬ್ದಾರಿ ಹೊರಬೇಕುಎಂದುಕಾಂಗ್ರೆಸ್ ಮುಖಂಡಅಡಗೂರುಎಚ್.ವಿಶ್ವನಾಥ್ ಸಲಹೆ ನೀಡಿದರು.

ಮೈಸೂರು ವಿಭಾಗೀಯರಾಜ್ಯ ಮತ್ತುಕೇಂದ್ರ ಸರ್ಕಾರಿ, ಅರೆ ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದಅಧಿಕಾರಿ ಗಳ, ನೌಕರರ ಪರಿಷತ್ ಮತ್ತುದಲಿತ ವಿದ್ಯಾರ್ಥಿಒಕ್ಕೂಟದ ಸಹಯೋಗದಲ್ಲಿ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಭಾನುವಾರಆಯೋಜಿ ಸಿದ್ದ 'ಬಡ್ತಿ ಮೀಸಲಾತಿ' ವಿಚಾರ ಸಂಕಿ ರಣದಲ್ಲಿಅವರು ಮಾತನಾಡಿದರು.

ಬಡ್ತಿ ಮೀಸಲಾತಿಯನ್ನುದೇವರಾಜಅರಸುಅವರು ನೀಡಿದ್ದರು.ಅದನ್ನುರಕ್ಷಿಸಬೇಕಾದ್ದುರಾಜ್ಯ ಸರ್ಕಾರದಕರ್ತವ್ಯವಾಗಿದೆ.ಸುಪ್ರೀಂಕೋರ್ಟಿನತೀರ್ಪನ್ನುರಾಜ್ಯ ಸರ್ಕಾರವು ಪ್ರಶ್ನಿಸಿ ಮೀಸಲಾತಿಯನ್ನು ಉಳಿಸಿಕೊಳ್ಳುವ ಗಂಭೀರ ಪ್ರಯತ್ನ ಮಾಡಬೇಕುಎಂದುಅವರು ಸಲಹೆ ನೀಡಿದರು.

> “ ಶಿಕ್ಷಣ ಪದ್ಧತಿಯಲ್ಲಿ ಎರಡು ದ್ವಂದ್ವಗಳು ಸೇರಿಕೊಂಡಿವೆ, ಒಂದು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣದ ಕೊರತೆ ಹಾಗೂ ಬೋಧನ ಕ್ಷೇತ್ರಕ್ಕೆ ಉತ್ತಮ ಶಿಕ್ಷಕರ ಅಭಾವ

ಈ ಬಗ್ಗೆ ಮುಖ್ಯಮಂತ್ರಿ ಕಾನೂನು ಸಚಿವರಿಗೆ ಸೂಚನೆ ನೀಡಬೇಕು.ಕಾನೂನು ಸಚಿವ, ಕಾನೂನು ಕಾರ್ಯ ದರ್ಶಿಗಳೊಂದಿಗೆ ಚರ್ಚಿಸಿ ನಿರ್ಣಯ ಗಳನ್ನು ತೆಗೆದುಕೊಳ್ಳಬೇಕು.ಬಡ್ತಿ ಮೀಸ ಲಾತಿ ಕೇವಲ ದಲಿತರಿಗೆ ಮಾತ್ರವಲ್ಲ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೂ ಸಿಗಬೇಕು ಎಂದರು.

ಸಂಕಿರಣ ಉದ್ಘಾಟಿಸಿದ ರಾಷ್ಟ್ರೀಯ ಪರಿಶಿಷ್ಟ ಜಾತಿ–ಆಯೋಗದ ಮಾಜಿಅಧ್ಯಕ್ಷಎಚ್.ಹನುಮಂತಪ್ಪ ಮಾತನಾಡಿ, ಖಾಸಗಿ ಕ್ಷೇತ್ರಗಳಲ್ಲಿ ಎಂಜಿನಿಯರಿಂಗ್ ಮುಗಿಸಿದ ದಲಿತರಿಗೆಉದ್ಯೋಗ ಸಿಗುತ್ತಿಲ್ಲ. ಈಗಾಗಲೇ ಕೇಂದ್ರ ಸರ್ಕಾರದಲಿತ ಹಿಂದುಳಿದ ವರ್ಗಗಳಿಗೆ ಸಿಗುತ್ತಿದ್ದ ಗ್ರೂಪ್ 'ಡಿ' ನೌಕರಿಯನ್ನುಖಾಸಗೀಕರಣ ಮಾಡಿಗುತ್ತಿಗೆ ನೀಡುತ್ತಿರುವುದುಅಪಾಯದ ಸಂಗತಿಎಂದುದೂರಿದರು.

ಮೈಸೂರು ವಿ.ವಿ ಕಾನೂನು ಅಧ್ಯಯನ ವಿಭಾಗದ ಪ್ರಾಧ್ಯಾಪಕ ಸಿ.ಬಸವ ರಾಜು ವಿಚಾರ ಮಂಡಿಸಿದರು. ಮೈಸೂರು ವಿ.ವಿಪ್ರಭಾರ ಕುಲಪತಿ ಪ್ರೊ.ದಯಾನಂದ ಮಾನೆ, ಪ್ರೊ.ಶಬ್ಬೀರ್ ಮುಸ್ತಫಾ, ಸಾಹಿತಿ ಪ್ರೊ.ಕೆ.ಎಸ್. ಭಗವಾನ್, ಪ್ರಾಧ್ಯಾಪಕ ಪ್ರೊ.ಮಹೇಶ ಚಂದ್ರಗುರು ಭಾಗವಹಿಸಿದ್ದರು.,

**–ಸಚ್ಚಿನ್ ಆರ್.ಬಿ**

## ಆರ್ಥಿಕ ವರದಿ ಮಾಡುವಲ್ಲಿ ಪತ್ರಕರ್ತರು ಅಸಮರ್ಥರು : ರವೀಂದ್ರಭಟ್

ಇಂದಿನ ದಿನಗಳಲ್ಲಿ ಅಪರಾಧ ಹಾಗೂ ಹಗೂ ಕ್ರಿಡಾ ವರದಿ ಮಾಡುವ ಪರ್ತಕರ್ತರು ಆರ್ಥಿಕ ನವರದಿಯನ್ನು ಮಾಡುವಲ್ಲಿ ಅಮರ್ಥರಾಗಿದ್ದಾರೆ ಎಂದು ಪತ್ರಕರ್ತ ರವೀಂದ್ರಭಟ್ ಅವರು ಅಬಿಪ್ರಾಯ ಪಟ್ಟರು.

ಮೈಸೂರು ವಿವಿಯ ಮಾನಸಗಂಗೋತ್ರಿಯಲ್ಲಿ ಅಯೋಜಿಸಿರುವ 40ನೇ ಸಮಾಜಿಕ ವಿಜ್ಞಾನ ಸಮ್ಮೇಳದಲ್ಲಿ ಸಮವಹನ ಮತ್ತು ಪತ್ರಿಕೋದ್ಯಮ ವಿಭಾಘಧ ವತಿಯಿಂದ ಅಯೋಜಿಸಿದ್ದ ಎರಡನೇ ದಿನದ ಉಪನ್ಯಾಸದಲ್ಲಿ ನೋಟು ರದ್ದತಿ ಮತತ್ತು ಮಾಧ್ಯಮ ವಿಷಯ ಕುರಿತು ಮಾತನಾಡಿದ ಅವರು,

ನೋಟು ರದ್ದತಿ ಮಾಡಿರುವುದು ದೇಶದ ಅಭಿವೃದ್ದಿಗೆ ಒಂದು ಉತ್ತಮ ಪ್ರತಿಕ್ರಿಯೇ ಆಗಿದೆ. ನೋಟು ರದ್ದತಿ ಮಾಡಿದ್ದರಿಂದ 15.4 ಲಕ್ಷಕೋಟಿ ಹಣದಲ್ಲಿ 14.15 ಲಕ್ಷ ಹಣ ಮಾತ್ರ ಹಿಂಪಡೆದಿದೆ. ಆದರೆ ಭಾರತಿಯರು ಪ್ರಾರಂಭದಲ್ಲಿ ನೋಟು ರದ್ದತಿಗೆ ಉತ್ತಮ ಪ್ರತಿಕ್ರಿಯೇ ನೀಡಿದ್ದರು ಆದರೆ ಅದು ಸಮರ್ಥನೀಯವಾಗಲಿಲ್ಲ ಏಕೆಂದರೆ ಭಾರತೀಯರ ಮನಸ್ಥಿತಿ ಕಾನೂನನು ಬದ್ದವಾಗಿ ಕಾನೂನನ್ನು ಮುರಿಯುವುದಾಗಿತ್ತು.

ಆದ್ದರಿಂದ ಈ ನೋಟು ರದ್ದತಿ ಕಾರ್ಯಕ್ರಮವನ್ನು ಇನ್ನಷ್ಟು ಚರ್ಚೆಗೆ ಒಳಪಡಿಸಬೇಕು. ಎಂದರು.

ಮತ್ತೊಬ್ಬ ಪತ್ರಕರ್ತ ಉಮೇಶ್‌ಭಟ್ ಮಾತನಾಡಿ ಈ ನೊಟು ರದ್ದತಿಯಿಂದಾದ ಸಮಸ್ಯೆಯನ್ನು ಕಾಲಾನುಕ್ರಮವಾಗಿ ಬಗೆಹರಿಸಬೇಕು, ಆದ್ದರಿಂದ ಬಾಗಲಕೋಟೆಯಲ್ಲಿ ಶೈಕ್ಷಣಿಕ ಪ್ರಜ್ಞೆ ಮೂಡಿಸುವ ಸಲುವಾಗಿ ಪತ್ರಿಕೆಎಗಳ ಮೂಲಕ ವಿಷಯಗಳನ್ನು ತಿಳಿಸುತ್ತಿದ್ದೇವೆ, ಹಾಗೂ ಹಲವಾರು ಸಂವಾದ



ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ಎಂದರು

ಮುಂದುವರಿದು ಮೋದಿಯವರು ಈ ನೋಟು ರದ್ದತಿಯ ಕಾಯ್ದೆಯನ್ನು ಜಾರಿಗೆ ತರುವ ಮುನ್ನ ಜನರ ಅನೂಕೂಲಕ್ಕಾಗಿ ಪರ್ಯಾಯ ಮಾರ್ಗವನ್ನು ಸೂಚಿಸಬೇಕಿತ್ತು ಎಂದರು.

ಬೆಮಗಳೂರಿನ ಪತ್ರಕರ್ತೆ ಆಶಾ ಮಾತನಾಡಿ ಇಂದು ಭಾರತದಲ್ಲಿ ಒಟ್ಟು ಶೇ.78 ರಷ್ಟು ಹಣ ಚಲಾವಣೆಯಾಗುತ್ತಿದೆ ಹಾಗೂ ಭಾರತೀಯ ಬ್ಯಾಂಕುಗಳಿಂದ ಶೇ.34% ಚಲಾವಣೆ ಇದೆ.

ಹಾಗೂ ಭಾರತದಲ್ಲಿ ಗ್ರಾಮೀಣ ವಿಭಾಗದಿಂದ 30%, ನಗರ ಪ್ರದೇಶದಿಂದ 54% ಚಲಾವಣೆ ನಡೆಯುತ್ತಿದೆ . ಆದರೆ ಮಾಧ್ಯಮಗಳಿ ಈ ಎಲ್ಲಾ ಆರ್ಥಿಕ ವಿಷಯಗಳನ್ನು ಚರ್ಚೆಗೆ ಒಳಪಡಿಸುತ್ತಿಲ್ಲ ಮತ್ತು ಜನರು ತಮ್ಮ ಅಭಿಪ್ರಾಯವನ್ನು ಬಹಳ ತರ್ಕಬದ್ದವಾಗಿ ತಿಳಿಸದಿರುವುದರಿಂದ ನೋಟು ರದ್ದತಿ ಕುರಿತು ಸಮಸ್ಯೆ ಉಂಟಾಗಿದೆ.

ಒಟ್ಟಾರೆಯಾಗಿ ಇನ್ನೂ ಅಧಿಕ ಪರ್ಯಾಯ ಮಾರ್ಗವನ್ನು ಅನುಸರಿಬೇಇತ್ತು ಹಾಗೂ ಪರ್ತಕರ್ತರು ಆರ್ಥಿಕ ವರದಿಯನ್ನು ಮಾಡುವುದರಲ್ಲಿ ವಿಫಲರಾಗಿದ್ದಾರ ಎನ್ನುವುದು ಈ ಉಪನ್ಯಾಸದ ಉದ್ದೇಶ

ನೋಟು ರದ್ದತಿಯನ್ನು ಸಂಭ್ರಮವಾಗಿ ಆಚರಿಸಿದ ಕನ್ನಡ ಪತ್ರಿಕೆಗಳು ಪ್ರಧಾನಿ ನರೇಂದ್ರ ಮೋದಿಯವರು 500, 1000 ರು. ನೋಟುಗಳನ್ನು ರದ್ದುಮಾಡಿದ್ದ ದುಸ್ಥಿಯನ್ನು ಕನ್ನಡ ಪತ್ರಿಕೆಗಳು ವೈಭವೀಕರಿಸಿ ಸಂಭ್ರಮಿಸಿದವು ಎಂದು ಕರ್ನಾಟಕ ಪತ್ರಿಕೆಯ ಸಹಾಯಕ ಸಂಪಾದಕ ಸಿ.ಜೆ.ರಾಜೀವ್ ವಿಶಾದಿಸಿದರು.

ಇಂದು ಪರ್ತಕರ್ತರಾಗಲಿ ಅಥವಾ ಪತ್ರಿಕೆಗಳಾಗಲಿ ಆರ್ಥಿಕಥೆಯ ಪರಿಣಾಮಕಾರಿ ವರಧಿಯನ್ನು

1946, 1978, ರಲ್ಲಿ ನಡೆದಿದ್ದ ನೋಟು ರದ್ದತಿಬಿಟ್ಟರೆ ಈದಗ 2016ರಲ್ಲಿ ನಡೆದನೋಟು ನಿಷೇಧ ಪರೀಣಾಮಕಾರಿಯಾಗಿದೆ, ಮಾಧ್ಯಮಗಳು ಇದನ್ನು ಹೆಚ್ಚು ವೈಭವೀಕರಿಸಿರುವುದರಿಂದಸಾರ್ವಜನಿಕರ ಮೇಲೆ ಮಾನಸಿಕ ಪರಿಣಾಮ ಉಂಟು ಮಾಡುತ್ತಿದೆ. ಎಂದರು.

ಸರ್ಕಾರ ಯಾವುದೆ ಯೋಜನನೆ ತರುವುದು ಕೇವಲ ಒಂದು ಗುಂಪಿಗೆ ಮಾತ್ರವಲ್ಲ ಈಡಿ ಸಾಮಜಿಕ ಸಮೂಹಕ್ಕೆ, ಪ್ರಧಾನಿ ಮೋದಿ ಅವರು 500 ,1000 ರೂ ನೋಟುಗಳ ರದ್ದತಿಯ ಕ್ರಮ ಜಾರಿಗೆ ತಂದಾಗ ಅದರ ಸಂಪೂರ್ಣ ಬದಲವಣೆ ಸಂಗ್ರಹಿಸಲು ಏಪ್ರಿಲ್ ವರೆಗೆ ಅಂತಿಮ ದಿನ ಇದ್ದಿತು. ಆದರೆ ಮಾಧ್ಯಮಗಳು ಅವಸರದ ಸಾಹಿತ್ಯದಿಂದ ವಿಷಯಯವನ್ನು ವೈಭವೀಕ–ರಿಸಿವೆ.

**– ರವಿಕುಮಾರ್.ಡಿ.**

## ನುಡಿಮುತ್ತು

"ನಾವು ಯಾವುದಕ್ಕೆ ಯೋಗ್ಯರೋ ನಮಗೆ ಆ ಸ್ಥಳ ದೊರಕುತ್ತದೆ. ಪ್ರತಿಯೊಂದು ಗುಂಡಿಗೂ ಒಂದು ಗುರಿಯಿದ್ದಂತೆ ಪ್ರತಿಯೊಬ್ಬ ಮನುಷ್ಯನಿಗೂ ಒಂದು ಗುರಿ ಅವಶ್ಯಕ. ಯಾವುದೇ ಗುರಿ ತಲುಪಬೇಕಾದರೆ ನಮ್ಮ ಹಿಂದೆ ಗುರುವಿನ ಮಾರ್ಗದರ್ಶನವಿರಬೇಕು. ಮುಂದೆ ಗುರಿಯ ಕಡೆಗೆ ಸಾಗುವ ಪ್ರಯತ್ನವೀರಬೇಕು. ಆ ಗುರಿ ಒಳ್ಳೆಯದಾಗಿರಬೇಕು ಹೊರತು ಮತ್ತೊಬ್ಬರಿಗೆ ಕೇಡನ್ನು ಬಗೆಯುವಂತಾಗಿರಬಾರದು"

ಸ್ವಾಮಿ ವಿವೇಕಾನಂದರು

## ಸಂಪಾದಕೀಯ ಮಂಡಳಿ

ಸಂಪಾದಕರು: ಸಿ.ಕೆ.ಪುಟ್ಟಸ್ವಾಮಿ
ವಿದ್ಯಾರ್ಥಿ ಸಂಪಾದಕರು: ಸಚ್ಚಿನ್.ಆರ್.ಬಿ, ಶ್ರೇಯಸ್, ರಾಜು, ರಾಕೇಶ್,ರವಿಕುಮಾರ್.ಡಿ
ಪುಟ ವಿನ್ಯಾಶ: ಸಚ್ಚಿನ್ ಆರ್ .ಬಿ

# ಅಸ್ಪೃಶ್ಯತೆ ಮನುಷ್ಯ ಕುಲವೇ ನಾಚಿಕೆ ಪಡುವಂತ ಸಂಗತಿ

ಪಿತೂರಿಗಳಿಂದ ದಲಿತ ಸಮುದಾಯವನ್ನು ತುಳಿಯುವಂಥ ಅಪಾಯಕಾರಿ ವರ್ಗಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ದಯಾನಂದ ಮಾನೆ ಕಳವಳ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ವತಿಯಿಂದ ಭಾನುವಾರ ಏರ್ಪಡಿಸಿದ್ದ 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯತಡೆ ತಿದ್ದುಪಡಿ ಕಾಯ್ದೆ–2015' ಕುರಿತು ವಕೀಲರಿಗೆ ಒಂದು ದಿನದ ಕಾರ್ಯಗಾರ ಮತ್ತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ಎಲ್ಲಾ ಕ್ಷೇತ್ರಗಳಲ್ಲೂ ಅಸ್ಪೃಶ್ಯತೆ ಹೆಸರಿನಲ್ಲಿ ದಲಿತರನ್ನು ತುಳಿಯಲಾಗುತ್ತಿದೆ. ಇಂಥ ಅಮಾನವೀಯ ಕೃತ್ಯಗಳು ವಿದೇಶಗಳಲ್ಲೂ ಜರುತ್ತಿರುವುದು ಆತಂಕಕಾರಿ ವಿಚಾರ. ಇಂಥ ಹೀನ ನಡವಳಿಕೆ ಮನುಷ್ಯ ಕುಲವೇ ನಾಚಿಕೆ ಪಡುವಂತ ಸಂಗತಿ. ಇದನ್ನು ತಡೆಗಟ್ಟಲು ಹೆಚ್ಚೆಚ್ಚು ಉಪನ್ಯಾಸಗಳನ್ನು ಏರ್ಪಡಿಸಿ ಜನಸಾಮಾನ್ಯ–ರಿಗೆ ಕಾನೂನಿನ ಅರಿವನ್ನು ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

ಭಾರತದಲ್ಲಿ ದಲಿತ ದೌರ್ಜನ್ಯ ಇಂದು ನಿನ್ನೆಯ



ಪರಿಕಲ್ಪನೆಯಲ್ಲ. ಮನುಶಾಸ್ತ್ರ ಬಂದಾಗಿನಿಂದ ದಲಿತರ ಮೇಲೆ ಮಾನಸಿಕ ಹಾಗೂ ದೈಹಿಕ ದೌರ್ಜನ್ಯ ಆಗುತ್ತಿವೆ. ಇತ್ತೀಚೆಗೆ ಬೆಳಗಾಂ ಜಿಲ್ಲೆಯ ಬೆಳ್ಳಿಂಗೆರೆ, ಶಿವಮೊಗ್ಗದ ತತ್ತೂರು ಗ್ರಾಮಗಳ ದಲಿತರು ಒಂದು ಹೊಲದಲ್ಲಿ ಹಸುಗಳಿಗೆ ಹುಲ್ಲನ್ನು ಕುಯ್ದುಕೊಂಡ ಕಾರಣಕ್ಕಾಗಿ, ಅವರಿಗೆ ಸಾರ್ವಜನಿಕವಾಗಿ ಮಲ ತಿನ್ನುವ ಶಿಕ್ಷೆ ವಿಧಿಸಿ ದೌರ್ಜನ್ಯ ಎಸಗಿದ ವಿದ್ವಂಸಕ ಕೃತ್ಯ ಎಸಗಲಾಯಿತು. ಆಂಧ್ರದಲ್ಲಿ ದಲಿತರ ಜೀವಕ್ಕೆ ಬೆಲೆಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅಲ್ಲಿನ ಜನರನ್ನು ಶೋಷಿಸಲಾಗುತ್ತಿದೆ. ಇಂಥ ಘಟನೆಗಳು ಸಮಸ್ತ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿವೆ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಸಂವಿಧಾನದ 17, 365, 366, 367 ಕಾಲಂಗಳಲ್ಲಿ ದೇಶದಲ್ಲಿ ಅಸ್ಪೃಶ್ಯತೆ ಆಚರಣೆ ಮಾಡಿದರೆ, ಅಂಥ–'ವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನುಗಳಿವೆ. ಆದರೆ, ಇಂದು ದಲಿತರ ಮೇಲೆ ದೌರ್ಜನ್ಯ ಎಸಗುವ 1 ಲಕ್ಷ ಅಪರಾಧಿಗಳ ಪೈಕಿ ಕೇವಲ ಒಬ್ಬರಿಗೆ ಮಾತ್ರ ಸಾಧಾರಣ ಶಿಕ್ಷೆ ವಿಧಿಸಲಾಗುತ್ತಿರುವುದು ವಿಪರ್ಯಾಸಇಂಥ ಅಪರಾಧಿಗಳಿಗೆಕಠಿಣ ಶಿಕ್ಷೆಗಳಾಗಬೇಕು. ಆ ಮೂಲಕ ಕಾನೂನು ವ್ಯವಸ್ಥೆ ದೌರ್ಜನ್ಯಗಳ ತಡೆಗೆ ಮುಂದಾಗಬೇಕು ಎಂದರು. ದಲಿತ ಸಮುದಾಯ ಅಂಬೇಡ್ಕರ್‌ರನ್ನು ಭಾವನಾತ್ಮಕವಾಗಿ ಪರಿಗಣಿಸುವ ಬದಲು ಬೌದ್ಧಿಕವಾಗಿ ನೋಡಬೇಕಾಗಿದೆ. ಅವರ ವಿಚಾರಗಳನ್ನು ಪ್ರತಿ ಹಳ್ಳಿಯ ಮನೆ–ಮನೆಗೂ ತಲುಪಿಸುವ ಕಾರ್ಯ ಆಗಬೇಕಿದೆ. ಆ ಮೂಲಕ ಪ್ರತಿ ದಮನಿತರಲ್ಲೂ ಕಾನೂನಿನ ಅರಿವು ಮೂಡಿಸಬೇಕಿದೆ ಎಂದು ತಿಳಿಸಿದರು.

ಬೆಂಗಳೂರಿನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ನಿವೃತ್ತ ನ್ಯಾಯಾಧೀಶ ಜಿ.ಕೆ.ಪೋಖಲೆ ಮಾತನಾಡಿ ದೌರ್ಜನ್ಯ ಕುರಿತು ಸಾಕಷ್ಟು ಕಾಯ್ದೆಗಳಿದ್ದರೂ ನ್ಯಾಯಾಲಯಗಳಲ್ಲಿ ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ಸಿಗುತ್ತಿಲ್ಲ. ನಮ್ಮಲ್ಲಿ ಜಾತಿ ನಿಂಧನೆ ಎಲ್ಲ ಕ್ಷೇತ್ರಗಳಲ್ಲೂ ಇದೆ. ಅದನ್ನು ತಡೆಗಟ್ಟಲು ಕಾನೂನು ನೆರವು ಸಮಿತಿ ಇದೆ. ಆದರೆ, ಸಮಿತಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ನ್ಯಾಯಾದೀಶರ ನಿರ್ಲಕ್ಷ್ಯ ಮನೋಭಾವ ಇದಕ್ಕೆ ಕಾರಣ ಎಂದು ವಿಷಾಧಿಸಿದರು. ನವದೆಹಲಿಯನ್ಯಾಷನಲ್ ದಲಿತ್ ಮೂವ್‌ಮೆಂಟ್ ಫಾರ್ ಜಸ್ಟೀಸ್ ಅಧಿಕಾರಿ ಅಭಿರಾಮಿ, ದಲಿತ ವಿಮೋಚನೆಯ ರಾಷ್ಟ್ರೀಯ ಮಾನವ ಹಕ್ಕುಗಳ ವೇದಿಕೆ ರಾಜ್ಯ ಸಂಚಾಲಕ ಬಸವರಾಜ ಕೌತಾಳ, ಕೇಂದ್ರದ ಸಂಯೋಜನಾಧಿಕಾರಿ ಡಾ. ಎಸ್.ನರೇಂದ್ರಕುಮಾರ್ ಇದ್ದರು.

ಶ್ರೇಯಸ್‌ದೇವನೂರ್

## ಸಂಪಾದಕೀಯ

### ರಾಜಕೀಯ ತಿಕ್ಕಾಟದ ಕಾವೇರಿ

ಕಾವೇರಿ ನೀರಿಗಾಗಿ ಕರ್ನಾಟಕ ಮತ್ತು ತಮಿಳುನಾಡು ನಡುವೆ ತುಂಬಾ ತಿಕ್ಕಾಟಗಳು ನಡೆಯುತ್ತಿವೆ. ಆದರೆ ಕರ್ನಾಟಕದಲ್ಲಿ ತಮಿಳರನ್ನು ತಮಿಳುನಾಡಿನಲ್ಲಿ ಕನ್ನಡಿಗರನ್ನು ಹೊಡೆಯುವುದು ಬಸ್ಸು ಕಾರು ಲಾರಿಗೆ ಬೆಂಕಿ ಹಚ್ಚುವುದರಿಂದ ಬರುವ ಲಾಭವಾದರೂ ಏನು. ಒಂದು ರಾಜ್ಯದ ಸಮಸ್ಯೆಯನ್ನು ಬಗೆಹ–ರಿಸಿಕೊಳ್ಳಬೇಕಾದರೆ ಒಂದು ಆ ರಾಜ್ಯದಲ್ಲಿ ಮಳೆ ಬೆಳೆ ಚೆನ್ನಾಗಿದ್ದು ಮತ್ತು ಕುಡಿಯುವ ನೀರಿನ ಸಮಸ್ಯೆ ಇಲ್ಲದಿದ್ದರೆ ಮಾತ್ರ ಪಕ್ಕದ ರಾಜ್ಯಕ್ಕೆ ನೀರು ಕೊಡುವುದರಲ್ಲಿ ಯಾವುದೇ ಸಮಸ್ಯೆಗಳು ಇರುವುದಿಲ್ಲ. ನಮ್ಮ ರಾಜ್ಯದಲ್ಲಿ ಈ ಬಾರಿ ಯಾವುದೇ ಸರ್ವಕಾಲಿಕ ಮಳೆಗಳು ಆಗಿಲ್ಲದ ಕಾರಣ ಪಕ್ಕದ ರಾಜ್ಯ ಈ ಸಮಸ್ಯೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕನಾಟಕದ ಮೈಸೂರು ಪ್ರಾಂತ್ಯದ ಪ್ರಮುಖ ಅಣೆಕಟ್ಟಾದ ಕೆ ಆರ್ ಎಸ್ ನಲ್ಲಿ ಈ ಬಾರಿ ನೀರಿನ ಮಟ್ಟ ಕಡಿಮೆ ಇದ್ದು ಮೈಸೂರು ಬೆಂಗಳೂರು ಮತ್ತು ಮಂಡ್ಯ ಕೃಷಿ ಮತ್ತು ಕುಡಿಯುವ ನೀರಿಗೆ ತೊಂದರೆ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಪಕ್ಕದ ರಾಜ್ಯ ನೀರು ಬಿಡಿ ಎಂದು ಕೇಳುವುದು ಸರಿಯೇ.?ನೀರು ಇದ್ದರೆ ನಮ್ಮ ರಾಜ್ಯದಿಂದ ನೀರು ಬಿಡಲು ನಮಗೇನು7 ಸಮಸ್ಯೆ ?ಆ ರಾಜ್ಯಕ್ಕೆ ನೀರು ಕೊಡಿ ಎಂದು ಸುಪ್ರೀಂ ಕೋರ್ಟಿಗೆ ಅರ್ಜಿಹಾಕುವುದು ಸರಿಯೇ?ಒಂದು ಜೀವಕ್ಕೆ ಆಹಾರ ಗಾಳಿ ಬೆಳಕು ಹೇಗೆ ಮುಖ್ಯವೋ ಹಾಗೆ ನಮ್ಮ ರಾಜ್ಯದ ಜನಕ್ಕೆ ಕುಡಿಯುವ ನೀರು ಮುಖ್ಯ. ಅಷ್ಟನ್ನೂ ತಿಳಿಯದೇ ಕೋರ್ಟ್ ಮೆಟ್ಟಲೇರುವುದು ಸರಿಯೇ ?ಪಕ್ಕದ ರಾಜ್ಯದ ಮಂತ್ರಿಗಳು ಮತ್ತು ನಮ್ಮ ರಜ್ಯದ ಮಂತ್ರಿಗಳು ಸಭೆ ಕರೆದು ಈ ಸಮಸ್ಯೆಗಳ ಬಗ್ಗೆ ಮಾತನಾಡಿ ಸರಿ ನಿರ್ಧಾರವನ್ನು ಕೈಗೊಳ್ಳಬೇಕು.ಆಗ ಮಾತ್ರ ಎರಡು ರಜ್ಯಗಳ ನಡುವೆ ಒಂದು ಒಳ್ಳೆಯ ಸಂಬಂಧ ಬೆಳೆಯುತ್ತದೆ. ಇಲ್ಲದಿದ್ದರೆ ಗಲಭೆ ಪ್ರತಿಭಟನೆಗಳು ಹೆಚ್ಚುತ್ತ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಹಾಗೆಯೆ ಇಂತಹದ್ದನ್ನು ನೋಡುವ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬಹುದು. ಆದರೆ ರಜಕೀಯ ತಿಕ್ಕಾಟದಿಂದ ಎರಡು ರಾಜ್ಯದ ಜನರಿಗೆ ಪ್ರಧಾನಿಯವರು ಒಂದು ವಿಶ್ವಾಸನೀಓಯ ಮಾತು ಹೇಳಿದ್ರೆ ಜನರು ನಿಶ್ಚಿಂತರಗಿ ತಮ್ಮ ಕಾರ್ಯಗಳನ್ನು ನಡೆಸುತತ್ತಾರೆ. ಇದಕ್ಕೆ ಬದಲಾಗಿ ಕೇಂದ್ರ ಸರ್ಕಾರ ರಾಜಕಾಈಯ ನಾಟಕವಾಡುತ್ತಿದೆ.ಆದ್ದರಿಂದ ಕೋರ್ಟಿನ ಮೊರೆ ಹೋಗುತ್ತಾರೆ.ಕೋರ್ಟಿನಲ್ಲೂ ಸಹ ಸತ್ಯವನ್ನು ತಿಳಿಯದೇ ನೆರೆಯ ರಾಜ್ಯಕ್ಕೆ ನೀರು ಬಿಡಬೇಕೆಂದು ತೀರ್ಪುನೀಡಿದರೆ ನಮ್ಮ ರಾಜ್ಯದ ಜನರು ಕುಡಿಯಲು ನೀರು ಎಲ್ಲಿ ತರುತ್ತಾರೆ.ನಮ್ಮ ದೇಶದಲ್ಲಿ ಕೋರ್ಟ್‌ನ್ನು ದೇವಾಲಯ ಎಂದು ಕರೆಯುತ್ತಾರೆ.ಆದರೆ ಅವು ಕೊಡುವ ತೀರ್ಪುಗಳು ಸಾಮನ್ಯರನ್ನು ಕೆರಳಿಸುತ್ತವೆ.

# ಅಂತರ ಕಾಲೇಜುಗಳ ಪುಟ್ಬಾಲ್ ಪಂದ್ಯಾವಳಿಗೆ ಚಾಲನೆ



ಮೈಸೂರಿನ ಶ್ರೀ ಚಾಮರಾಜೇಂದ್ರ ಇಂಜಿನಿಯ–ರಿಂಗ್ ಕಾಲೇಜಿನ ಆವರಣದಲ್ಲಿ ಮೈಸೂರು ಪ್ರಾಂತೀಯ ಇಂಜಿನಿಯರಿಂಗ್ ಅಂತರ ಕಾಲೇಜುಗಳ ಫುಟ್ಬಾಲ್‌ಎರಡು ದಿನಗಳ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.

ಪಂದ್ಯಾವಳಿಯನ್ನು ಮಹಾರಾಣಿ ಮಹಿಳಾ ವಿಜ್ಞಾನಕಾಲೇಜಿನಕ್ರೀಡಾ ವಿಭಾಗದ ನಿರ್ದೇಶಕಿಡಾ. ರಮಣಿ ಉದ್ಘಾಟಿಸಿದರು. ಬಳಿಕ ಮಾತನಾಡಿದಅವರು ಪಠ್ಯಚಟುವಟಿಕೆಗಳ ಜೊತೆ ಪಠ್ಯೇತರ ಚಟುವಟಿ–ಕೆಗಳಿಗೂ ಮಹತ್ವ ನೀಡಬೇಕು. ಅದರಲ್ಲೂ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ತೊಡಗಿಸಿ ಕೊಂಡರೆ ದೈಹಿಕ ಬೆಳವಣಿಗೆಯೊಂದಿಗೆ ಮಾನಸಿಕ ಬೆಳವಣಿಗೆಯೂ ಆಗಲಿದೆಎಂದರು.

ಕ್ರೀಡೆಯಲ್ಲಿ ವಿವಿಧ ಜಿಲ್ಲೆಗಳ 10 ತಂಡಗಳು ಪಾಲ್ಗೊಂಡಿವೆ. – ರಾಕೇಶ್. ಆರ್

# ಪ್ರವಾಸಿ ಗೃಹರಕ್ಷಕರಿಗೆ ಸೈಕಲ್‌ಜಾಥಾ

ರಾಜ್ಯದಲ್ಲಿರುವ ಪ್ರವಾಸಿ ತಾಣಗಳಲ್ಲಿ ಪ್ರವಾಸೋದ್ಯಮ ಇಲಾಖಾ ವತಿಯಿಂದ ಪ್ರವಾಸಿಗರ ಭದ್ರತೆಗೋಸ್ಕರ ಮತ್ತು ಮಾಹಿತಿ ನೀಡಲು ಪ್ರವಾಸಿ ಮಿತ್ರರನ್ನು ನೇಮಿಸಲಾಗುತ್ತಿದೆ. ಚಾಮರಾಜನಗರ, ಕೊಡಗು, ರಾಮನಗರ, ಹಾವೇರಿ, ಚಿಕ್ಕಮಗಳೂರು ಐದು ಜಿಲ್ಲೆಗಳ 50ಗೃಹರಕ್ಷಕರಿಗೆ ಪ್ರವಾಸಿ ಮಿತ್ರತರಬೇತಿ ನೀಡಲಾಗುತ್ತಿದೆ.ತರಬೇತಿಕಾರ್ಯಾಗಾರ ಮುಕ್ತಾಯಗೊಂಡಿದ್ದು 'ಇಯರ್‌ಆಫ್ ದಿ ವೈಲ್ಡ್ ಲೈಫ್' ಉದ್ದೇಶದಡಿ ಮೈಸೂರಿನಿಂದ ಶ್ರೀರಂಗಪಟ್ಟಣ ಪಾಲಹಳ್ಳಿ ರಸ್ತೆ ಮಾರ್ಗವಾಗಿ ಪ್ರವಾಸಿ ಗೃಹರಕ್ಷಕರಿಗೆ ಸೈಕಲ್‌ಜಾಥಾಆಯೋಜಿಸಲಾಗಿತ್ತು. . ಪ್ರವಾಸೋದ್ಯಮ ಇಲಾಖೆ ಹಾಗೂ ಕೆ.ಎಸ್.ಟಿ.ಡಿ.ಸಿ ವತಿಯಿಂದ–ಆಯೋಜಿಸಲಾದಜಾಥಾದಲ್ಲಿ ನೀರು ಉಳಿಸಿ, ಕಾಡು ಬೆಳೆಸಿ, ಪರಿಸರ ಸಂರಕ್ಷಿಸಿ ಎಂಬ ಘೋಷಣೆಯೊಂದಿಗೆ ಸ್ವಾಗತಿಲಾಯಿತು.ಮೈಸೂರುಜಿಲ್ಲಾಧಿಕಾರಿಡಿ.ರಂದೀಪ್ ಮಾರ್ಗದರ್ಶನದಲ್ಲಿಮಹಾನಗರಪಾಲಿಕೆಆಯುಕ್ತಜಿ. ಜಗದೀಶ್‌ಅವರ ಸಹಕಾರದಲ್ಲಿಟ್ರಿಣ್‌ಟ್ರಿಣ್‌ಯೋಜನೆಯ ಸೈಕಲ್ ಗಳನ್ನು ಬಳಸಿಕೊಂಡು ಜಾಥಾ ನಡೆಸಲಾಯಿತು. ಈ ಸಂದರ್ಭ ಪ್ರವಾಸೋದ್ಯಮಇಲಾಖೆಯಉಪ ನಿರ್ದೇಶಕಜನಾರ್ದನ್ ಹೆಚ್.ಪಿ, ಮೈಸೂರುಜಿಲ್ಲಾ ಹೋಟೆಲ್ ಮಾಲಿಕರ ಸಂಘದಅಧ್ಯಕ್ಷ ನಾರಾಯಣಗೌಡ, ಮೈಸೂರುಟ್ರಾವಲ್ಸ್‌ಏಜೆಂಟ್ಸ್ ಅಸೋಸಿಯೇಶನ್ ಅಧ್ಯಕ್ಷ–ಜಯಕುಮಾರ್, ಹೋಟೆಲ್ ಮಯೂರಯಾತ್ರಿ ನಿವಾಸ ವ್ಯವಸ್ಥಾಪಕಚಂದ್ರು ಮತ್ತಿತರರು ಉಪಸ್ಥಿತರಿದ್ದರು.




## ಓದುಗರ ಪತ್ರ

### ನೀರಿನ ಸಮಸ್ಯೆ

ಮಾನಸಗಂಗೋತ್ರಿಯ ಪುರುಷರ ಸ್ನಾತಕೋತ್ತರ ವಿದ್ಯಾರ್ಥಿನಿಲಯದಲ್ಲಿ ಹಲವಾರು ದಿನಗಳಿಂದ ಶುದ್ಧ ಕುಡಿಯುವ ನೀರಿನ ಸಮಸ್ಯೆ ಎದುರಗಿದೆ. ವಿದ್ಯಾರ್ಥಿಗಳು ಎಷ್ಟೇ ಮನವಿ ಮಾಡಿಕೊಂಡಿದ್ದರೂ ಇನ್ನೂ ಸಹ ಈ ಸಮಸ್ಯೆ ಬಗೆ ಹರಿದಿಲ್ಲ. ಆದ್ದರಿಂದ ಹಾಸ್ಟಲ್ ನ ಎಲ್ಲಾ ವಿದ್ಯಾರ್ಥಿಗಳು ಪ್ರತಿಭಟಿಸಲು ನಿರ್ಧ–ರಿಸಿದ್ದಾರೆ. ಇದಕ್ಕೂ ಮುನ್ನ ನೀರವ–ರಿಗೆ ಸಂಭಂಧಿಸಿದ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತಾರೆ.

**ಸಂತೋಷ್ ಎಂ ಕೆ**
**ಮನೋವಿಜ್ಞಾನ ವಿಭಾಗ**
**ದ್ವಿತೀಯ ಎಂ ಎ**

### ಸ್ವಚ್ಛತೆಯ ಜಾಗೃತಿ

ಮೈಸೂರು ವಿವಿಯಲ್ಲಿನ ವಿಜಯಲಕ್ಷ್ಮಿ ವಿಲಾಸ್ ಅರಮನೆಯ ಅಕ್ಕ ಪಕ್ಕದಲ್ಲಿ ಹುಟ್ಟು ಹಬ್ಬಗಳನ್ನು ಆಚರಿಸಿಕೊಳ್ಳುತ್ತಾರೆ.ಊಟ ಮಾಡುತ್ತಾರೆ ನಂತರ ಪ್ಲಾಸ್ಟಿಕ್ ಪೇಪರ್ ಊಟದ ಪ್ಲೇಟ್ಗಳು ಕಾಗದಗಳನ್ನು ಎಲ್ಲಿಬೇಕಲ್ಲಿ ಬಿಸಾಡಿ ಹೋಗುತ್ತಾರೆ.ದಯವಿಟ್ಟು ನಮ್ಮೆಲ್ಲರ ಸ್ವತ್ತು ಆಗಿರುವ ಅರಮನೆಯನ್ನು ನಾವು ಸ್ವಚ್ಚತೆಯಿಂದ ಕಾಪಾಡಿದಾಗ ಮಾತ್ರ ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಇದರ ಬಗ್ಗೆ ಅರಿವಾಗುತ್ತದೆ.

**ಮಹೇಶ ಜಿ**
**ಸಮಾಜಶಾಸ್ತ್ರ ವಿಭಾಗ**
**ಮಾನಸಗಂಗೋತ್ರಿ ಮೈಸೂರು**

### ಮರಗಳ ಹನನ

ಮೈಸೂರು ವಿವಿಯಲ್ಲಿ ಮರಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ ಇದರ ಕಡೆ ವಿವಿಯ ತೋಟಗಾರಿಕೆ ಇಲಾಖೆಯು ಗಮನಹರಿಸಬೇಕು.ನಮ್ಮಲ್ಲಿ ಮರಗಳನ್ನು ಕಡಿದ ಮೇಲೆ ಗಿಡ ನೆಡುವ ಪ್ರವೃತ್ತಿ ಇದೆ. ಆದರೆ ಇಲ್ಲಿ ಇದಕ್ಕೆ ವಿರುದ್ಧವಾಗಿದೆ.

**ನಂದೀಶ್ ಎಂ ಕೆ**

# ಉತ್ತಮ ಕೃತಿಗಳಿಂದ ಸಮಾಜದ ಬೆಳವಣಿಗೆ ಸಾಧ್ಯ : ಪ್ರೊ.ಸಿ.ಬಸವರಾಜು

ಸಮಾಜಮುಖಿ ಬರವಣಿಗೆ ಹಾಗೂ ಉತ್ತಮ ಸಾಹಿತ್ಯ ಸತ್ವ ಒಳಗೊಂಡ ಕೃತಿಗಳಿಂದ ಮಾತ್ರ ಸಮಾಜ ಬೆಳವಣಿಗೆ ಹೊಂದಲು ಸಾದ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಸಿ.ಬಸವರಾಜು ಅಭಿಪ್ರಾಯ ಪಟ್ಟಿದ್ದಾರೆ

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಸಂಸ್ಥೆಯ ಬಿ.ಎಂ.ಶ್ರೀ. ಸಭಾಂಗಣದಲ್ಲಿ ಗುರುವಾರ ಬುದ್ಧ ಅಂತರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಡಾ.ಎಂ. ಕನ್ನಿಕಾ ರಚನೆಯ "ಸ್ಪರ್ಶ ಜಾನಪದ" ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಪುಸ್ತಕ ಬರವಣಿಗೆ ಮಾತಿನಷ್ಟು ಸುಲಭವಲ್ಲ, ಸಾಗಿತ ಕ್ಷೇತ್ರ ವಿಕಾಸಗೊಳ್ಳಲು ಹಾಗೂ ಸಾಹಿತ್ಯದ ಬೆಳವಣಿಗೆ ಪುಸ್ತಕದ ಬಂಡಾರದಿಂದೇ ಸಾದ್ಯ, ಯಾವ ಭಾಷೆಯಲ್ಲಿ ಉತ್ತಮ ಸಾಹಿತ್ಯವನ್ನು ಹೊಂದಿರುವ ಅಂಶಗಳುಳ್ಳ ಪುಸ್ತಕಗಳು ಹೆಚ್ಚಾಗಿ ಲಭ್ಯವಿದೆಯೊ, ಆ ಭಾಷೆ ಜನಸಾಮಾನ್ಯರಿಗೆ ಬಹಳ ಹತ್ತಿರವಾಗುತ್ತದೆ, ಆ ಮಾದರಿಯಲ್ಲಿ ಕನ್ನಡದಲ್ಲಿಯೂ ಸಾಕಷ್ಟು ಕೃತಿಗಳು ಕಂಡುಬರುತ್ತಿದ್ದು, ಬರವಣೆಯಲ್ಲಿ ಸಮಾಜ ಮುಖಿಯ



ಚಿಂತನೆ ಇದ್ದರೆ ಸಾಹಿತ್ಯಕ್ಕೆ ಸೂಕ್ತ ಬೆಲೆ ದೊರೆಯಲಿದೆ ಎಂದು ಹೇಳಿದರು.

ರಚನೆಯಾಗುವ ಎಲ್ಲ ಪುಸ್ತಕಗಳು ಓದುಗನ ಮೇಲೆ ಪ್ರಭಾವ ಬೀರುವುದಿಲ್ಲ, ಉತ್ತಮ ಸಾಹಿತ್ಯ ಸತ್ವ, ವಿಚಾರದ ಸೂಕ್ಷ್ಮತೆ ಮತ್ತು ರಚನೆಯಲ್ಲಿ ತೀಕ್ಷ್ಣ–ತೆ ಕಂಡುಬಂಡು ಬರುವ ಕೃತಿಗಳು ಮಾತ್ರ ಓದುಗನ ಮೇಲೆ ಪ್ರಭಾವ ಬೀರಿ, ಉತ್ತಮ ಫಲಿತಾಂಶ ನೀಡುತ್ತವೆ, ಆ ದಿಕ್ಕಿನತ್ತ ನಮ್ಮ ಕೃತಿ ರಚನೆಗಾರರು ಮುಂದಾಗಬೇಕು. ಸಮಾಜದಲ್ಲಿನ ಅಸಮಾನತೆಯ ದೋರಣೆಗಳನ್ನು ಬರವಣಿಗೆಯ ಮೂಲಕ ಖಂಡನೆ ಹಾಗೂ ಜಾಗೃತಿ ಮೂಡಿಸುವ ಕೃತಿಗಳ ರಚನೆಯಾದರೆ ಮಾತ್ರ ಉತ್ತಮ ಸಮಾಜಕ್ಕೆ ಪೂರಕವಾಗುತ್ತದೆ ಎಂದತು.

ಸಮಾಜವನ್ನು ಉತ್ತಮ ಮಾರ್ಗದಲ್ಲಿ ನಡೆಸುವ ನಿಟ್ಟಿನಲ್ಲಿ ಸಾಹಿತಿಗಳ, ಕಲಾವಿದರ ಪಾತ್ರವು ಬಹಳ ಮುಖ್ಯವಾಗಿದೆ. ಸಾಹಿತಿಗಳು ಮತ್ತು ಕಲಾವಿದರು ಸಮಾಜದ ಸ್ಥಿತಿಗತಿಯನ್ನು ವಿಮರ್ಶಿಸುವ ಆ ನಿಟ್ಟಿನಲ್ಲಿ ಅದನ್ನು ತಮ್ಮ ಬರವಣಿಗೆ ಮತ್ತು ಅಭಿನಯದ ಮೂಲಕ ಜನರಲ್ಲಿ ಪರಿವರ್ತನೆಯನ್ನು ತರುವ ಮೂಲಕ ಸಮಾಜದ ಹಿತವನ್ನು ಕಾಯುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ನಿಭಾಯಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಗ್ರಂಥಗಳು ಮುದ್ರಣಗೊಂಡರು ಓದುವ ಸಂಖ್ಯೆ ಕಡಿಮೆಯಾಗಿದೆ. ಯುವಶಕ್ತಿ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿನ ಜತೆಗೆ ಸಾಹಿತ್ಯ ಮತ್ತು ಹೊಸ, ಹೊಸ ವಿಚಾರಗಳನ್ನು ತಿಳಿಯುವ ನಿಟ್ಟಿನಲ್ಲಿ ಎಲ್ಲ ಕ್ಷೇತ್ರದ ಗ್ರಂಥಗಳನ್ನು ಅಧ್ಯಯನ ಮಾಡುವುದರ ಅವಶ್ಯಕತೆ ಇದೆ. ಯುವ ಸಮೂಕಹದ ಕೆಲವು ಮಂದಿಗಳು ಮಾತ್ರ ಗ್ರಂಥ, ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಸಾಹಿತ್ಯ ಅಥವಾ ಇತರೆ ವಿಚಾರಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು ಹೆಚ್ಚಿನದಾಗಿ ಅದರಲ್ಲಿ ತೊಡಗಿಸಿಕೊಂಡು ಆ ಮೂಲಕ ತಮ್ಮಲ್ಲಿನ ವಿಶೇಷ ಪ್ರತಿಭೆಯನ್ನು ಹೊರ ಹಾಕಬೇಕು ಎಂದು ತಿಳಿಸಿದರು.

ಸಮಾಜದ ಸಮಸ್ಯೆಗಳಿಗೆ ಪರಿಹಾರವನ್ನು ತಿಳಿಸುವ ಮತ್ತು ಸಮಸ್ಯೆಗಳನ್ನು ಗುರುತಿಸಿ ಅವುಗಳ ಬದಲಾವಣೆಗಾಗಿ ಜನರಲ್ಲಿ ಅರಿವು ಮೂಡಿಸುವಂತಹ ಕಾರ್ಯದಲ್ಲಿ ತೊಡಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯದ ಡೀನ್ ಪ್ರೋ.ಎ.ಬಾಲಸುಬ್ರಮಣಿಯನ್, ಕುವೆಂಪು ಕನ್ನಡ ಅಧ್ಯಾಯನದ ನಿರ್ದೇಶಕಿ ಪ್ರೊ.ಪ್ರೀತಿ ಶ್ರೀಮುಂಧರ್ ಕುಮಾರ್, ಪ್ರಧ್ಯಾಪಕಿ ಪ್ರೊ.ವಿ–ಜಯಕುಮಾರಿ.ಎಸ್.ಕರಿಕಲ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ವೈ.ಡಿ.ರಾಜಣ್ಣ, ಕೃತಿಯ ಕರ್ತೃ ಡಾ.ಎಂ.ಕನ್ನಿಕಾ ಸೇರಿದಂತೆ ಮೊದಲಾದವರು ಉಪಸ್ಥಿತ–ರಿದ್ದರು.

–ರವಿಕುಮಾರ್‌ಡಿ

ಜಗತ್ತಿನ ಸರ್ವ ಶೇಷ್ಠ ಅದೀದೇವತೆ ತಾಯಿ )

ತಾಯಿಗಿಂತ ದೇವರಿಲ್ಲ ,
ಸ್ನೇಹಿಗಿಂತ ಬಂಧುವಿಲ್ಲ,
ಪ್ರೀತಿಗಿಂತ ದ್ವೇಷವಿಲ್ಲ,
ಮನುಷ್ಯತ್ವಕಿಂತ ಮನುಷ್ಯನಿಲ್ಲ,
ಆದರೆ ತನ್ನ ದೈನಂದಿನಚಟುವ ಕೆಗಳ ಬಗ್ಗೆ
ಅರಿವಿರುವಂಗೆ, ಯಾವ ಜ್ಯೋತಿಷ್ಯವು
ಸರಿಸಾಟಿಯಿಲ್ಲ.........

ಈ ಮೇಲಿನ ವಾಕ್ಯಗಳಂತೆ ಅಮ್ಮ ಎಂಬಾ ಪದ ಕರ್ತವ್ಯವು, ವರವು ಯಾಗಿದೆ. ಮುಕ್ಕೋಟಿ ದೇವತಿಗಳಲ್ಲಿಯೇ " ಅತಿ ಶ್ರೇಷ್ಟತೇಯ ಪ್ರತೀಕ" ಯಾವುದೇ ಭಾಷೇಯ, ಯಾವದೇ ದೇಶದ ಮಗು ಮೊದಲಿಗೇ ಹೇಳುವುದು ಅಮ್ಮ ಎಂಬಾ ಎರಡಕ್ಷರದ ಪದ . ಜೀವನವೆಂಬ ಸಾಗರದಲ್ಲಿ ಅತಿ ಶ್ರೇಷ್ಠತೇಯ ಪಾತ್ರ ಅಮ್ಮನದು.

"ಹಸಿದವನಿಗೆ ಅನ್ನದ ಬೆಲೆ, ಕಷ್ಟಪಟ್ಟು ದುಡಿದವನಿಗೆ ಹಣದ ಬೆಲೆ, ಹಾಗೆಯೇ ತಾಯಿಯಲ್ಲದವನಿಗೇ ತಾಯಿಯ ಬೆಲೆಗೊತ್ತು .ಜಗತ್ತಿನಲ್ಲಿರುವುದು ನಾಲ್ಕು ವೇದಗಳು ಐದನೇ ವೇದ " ಪ್ರೀತಿ" ಈ ಪೀತಿ : ಸಹನೆ ,ನಿಸ್ವಾರ್ಥ , ಕರ್ತವ್ಯ, ಮುಂತಾದ ಹಲವು ಪದಗಳು ರೂಪುಗೊಂಡಿದ್ದೇ ಈ ಅಮ್ಮ ಎಂಬಾ ಶ್ರೇಷ್ಠ ಅಂಶದಿಂದ.

ನಾವು ಚಿಕ್ಕಂದಿನಿಂದ ಎಷ್ಟೇ ದೊಡ್ಡರಾಗಿರುವಾಗ ಅಂ–ದರೇ ಮಕ್ಕಳು ,ಮೊಮ್ಮಕ್ಕಳು ಏನೇಯಾದ್ದರೂ ನಮಗೆ, ನಮ್ಮ ದೇಹಕ್ಕೆ ಕೊಂಚ ನೋವಾದರೂ, ಅಂದರೇ ಎಡವಿದರಿಂದ ,ಇನ್ನೊಬ್ಬರಿಂದ ತುಳಿತಕ್ಕೊಳಗಾದಗ, ಅನೀರಿಕ್ಷಿತ ಬಿದ್ದಾಗ ಮೊದಲು ಬರುವ ಪದ ಅಮ್ಮ .... ಅಮ್ಮ .... ಅಮ್ಮ....ಎಂದೇ ಬರುತ್ತದೆ.

ಅತ್ಮಿಯರೇ ನಿಮಗೆ ಒಂದು ಘಟನೆಯನ್ನು ತಿಳಿಸಲು ಇಚ್ಚಿಸುವೆನು , ಜಯಲಕ್ಷ್ಮಿ ಎಂಬಾ ಮಹಿಳೆಯು ಹುಟ್ಟಿದು ಕಡುಬಡತನದ ಕುಟುಂಬದಲ್ಲಿ ,ಈ ಮಹಿಳೆಯೊಂದಿಗೆ ಇಬ್ಬರು ಸಹೋದರಿಯರು ,ಈಕೆ ತನ್ನ ಅಪ್ಪ ,ಅಮ್ಮನ ಕಷ್ಟವನ್ನು ನೋಡಲಾರದೇ ತಾನು ಸಹ ದನ ,ಆಡು ಮೆಯಿಸುತ್ತಾ,ಊರಿನ ಜನರ ಹೊಲ,ಗದ್ದೆಯಲ್ಲಿ ಕೆಲಸ ಮಾಡಿತಿದ್ದಳು. ಈ ಜಯಲಕ್ಷ್ಮಿಗೇ ಸರಿ ಸುಮಾರು ಕೇವಲ 12–13 ವರ್ಷದ ಹುಡುಗಿ ದಿನವಿಡಿ ಕೆಲಸ ಮಾಡಿ ಬಂದಿದ್ದ ಐದು, ಹತ್ತು ರುಪಾಯಿಯಲ್ಲಿಯೇ , ಮುದ್ದೆ, ಇಲ್ಲವೆ ರಾಗಿ ಗಂಜಿ ,ಅದು ಕೂಡ ಒಂದು ಅಥವಾ ಎರಡು ಒಪತ್ತು ಸಿಗುತ್ತಿತ್ತು, ಅದರಲ್ಲೂ ಬೇಸಿಗೆ ಬಂದರೇ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ ! ಈ ಸಮಯದಲ್ಲಿ ಕೆಲವು ಕಡೆ, ಈಗಲೂ ಗ್ರಾಮದಲ್ಲಿ " ಪರ" ಎಂದೂ ಮಾಡುವುದುಂಟು ಅಲ್ಲಿ ಸಿಕ್ಕಂತಹ ರಾಗಿಸ್ಯಾಮಗ, ರೊಟ್ಟಿ ಸಿಕ್ಕರೇ ಅಂದು ಜಯಲಕ್ಷ್ಮಿ ಮತ್ತು ಅವರ ಕುಟುಂಬ ಅದೇಷ್ಟೋ ಸಂತೋಷಕರ

# ಅಮ್ಮ..

ಎಂದರೇ "ಈಡೀ ಇಂಡಿಯಾ ಇಂದೂ ಪಾಕಿಸ್ತಾನದ ಮೇಲೆ ಗೆದ್ದಂತಹ ಸಂತೋಷ" ಆ ಎಳೆಯ ಕಣ್ಣುಗಳಲ್ಲಿ. ಹೀಗೆ ಸಾಗಿತ್ತಿದ್ದ ಜೀವನ, ಅಲ್ಲದೆ ಅವರಪ್ಪ ಶಿವಣ್ಣ ತಾಯಿ ಕೆಂಪಮ್ಮ ತಾವು ಕೂಲಿ ಮಾಡಿದ್ದರೆ ಮಾತ್ರ ಅ ದಿನದ ಊಟ. ಶಿವಣ್ಣನಿಗೆ ಸ್ವಲ್ಪ ಸ್ವ ಗ್ರಾಮದ ಪ್ರೇಮಿ. ಊರೇ ಅವನ ಉಸಿರು ಅದನ್ನು ಬಿಟ್ಟ ಬೇರೆ ಜಗತ್ತೇ ಗೊತ್ತೀರಲಿಲ್ಲ, ಆ ವ್ಯಕ್ತಿಗೆ ಆತನ ಮಾಡುತ್ತಿದ್ದ ಬಡಗೀಯ ಕೆಲಸದಿಂದ ಬರುತ್ತಿದ್ದ ಆ ಹಣ ಅವರ ಕುಟುಂಬದ ಆರು ಮಂದೀಯ ಎರಡು ಹೊತ್ತಿನ ಉಟಕ್ಕೆ ಸಾಲದು



, ಅದಕ್ಕಾಗಿ ಜಯಲಕ್ಷ್ಮಿಯು ಆ ಕುಟುಂಬದ ಹಿರಿಯ ಮಗಳಾಗಿದ್ದರಿಂದ ತನ್ನ ಸಹೋದರನ್ನು ಸಾಕುವ ಸಲುವಾಗಿ ಆ ಚಿಕ್ಕ ವಯಸ್ಸಿನಲ್ಲೇ ಕೆಲಸಕ್ಕೆ ಹೊಗುವುದು ಅನಿವಾರ್ಯವಾಯಿತ್ತು.

ಈಗೆ ಜೀವನ ನಡೆಸುತ್ತಿದ್ದರು ಇತ ಜಯಲಕ್ಷ್ಮಿ ಯೌವನ ವ್ಯವಸ್ಥೆಗೆ ಬಂದಳು. ಆಗ ಇನ್ನೂ ಅವಳಿಗೆ ಕೇವಲ 16, 17 ವಯಸ್ಸುನವಳು ಅವಳು ಒಬ್ಬ ಪಟ್ಟಣದ ಹುಡುಗ ರವಿ ಎಂಬಾತನನ್ನು ವಿವಾಹವಾದಳು, ಆತನೋ! ಮಹಾನ್ ಕುಡುಕ , ಆತನು ಗಾರೆ ಕೆಲಸದಿಂದ ಬಂದ ಹಣ ಅವನ ಸಾರಯಿ ಪ್ಯಾಕೇಟಿಗೆ ಮುಗಿಯಿತ್ತಿತ್ತು. ಅದರೋಂದಿಗೆ ಆತನು ಜಯಲಕ್ಷ್ಮಿಗೆ ಕೊಡುತ್ತಿದ್ದ. ಹೊಡೆತ, ಥಳಿತ, ಕಾಲಿನಿಂದ ಹೊದೆಯುತ್ತಿದದ್ದು. ಆ ನೋವು ಇಲ್ಲಿ ಆ ಹೆಣ್ಣಿಗೆ (ಜಯಲಕ್ಷ್ಮಿ) "ಪಾಪಿ ಸಮುದ್ರಕೋದರು ಮೊಳಕಾಲೂದ್ದ ನೀರು ಎಂಬಂತೇ"

ಅವಳ ಜೀವನವಾಗಿತ್ತು .

ಇತ್ತ ಅತ್ತೇ ನಿಂಗಮ್ಮನ ಅಸಡ್ಡೆ ಮಾತು, ಬೈಗುಳ, ತನ್ನ ಮಗನ ವರಸೆ ,ಪರವಹಿಸಿ ಅತನೋಂದಿಗೆ ಚೆನ್ನಾಗಿದ್ದು ತನ್ನ ಸೊಸೆಯನ್ನು ದೂರುತಿದ್ದಳು. ಮತ್ತೋಂದು ಕಡೆ ಮಾವ ಸೋಮಣ್ಣನ ನಿಂದನೆ. ದೇವರ ಆರ್ಶಿವಾದದಿಂದ ಅವಳಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು.

ಅದರೊಂದಿಗೆ ಇಷ್ಟು ಸಾಲದ ರವಿ ಇತರ ಬೋರೋಂದು ಹೆಣ್ಣಿನೋಂದಿಗೆ ಆನ್ಯೆತಿಕ ಸಂಬಂಧ ಬೇರೆ ಇತ್ತು. ಇಷ್ಟೇಲ್ಲಾ ನೋವಿನೋಂದಿಗೆ ಹೇಗೋ ಜೀವನ ನಡೆಸುತ್ತಿದ್ದಳು. ಆ ಜಯಲಕ್ಷ್ಮಿಗೇ ಅವಳ ತವರು ಮನೆಯವರು ಕಷ್ಟಪಟ್ಟು ದುಡಿದ ಹಣದಲ್ಲಿ, ತಮಗೆ ಇಲ್ಲದಿದ್ದರು ತಮ್ಮ ಮಗಳುನ್ನು ಅವಳ ಅತ್ತೆ–ಮಾವ ಚೆನ್ನಾಗಿ ನೋಡಿಕೊಳ್ಳಲಿ ಎಂದೂ ಅವರಿಗೆ ಪ್ರತಿ ತಿಂಗಳಿಗು ಸ್ವಲ್ಪ ರಾಗಿನೋ, ಯಾರೋ ಕೊಟ್ಟ ಆ ಸ್ವಲ್ಪ ಕಾಳು– ಕಡ್ಡಿಯನ್ನು ಸಂಗ್ರಹಿಸಿ ಜಯಲಕ್ಷ್ಮಿಯ ತಾಯಿ ಕೆಂಪಮ್ಮ ಕೊಡುತ್ತಿದ್ದಳು. ಹೀಗೆ ಇದ್ದ ಜೀವನದಲ್ಲಿ ಒಂದು ಬಿರುಗಾಳಿ ಬೀಸಿಯೇ ಬಿಟ್ಟತ್ತು . " ಅ ಗಾಳಿಯಲ್ಲಿ ಜೀವನ ನಾಟಕಗಾರ್ತಿ ಕೊನೆ ಉಸಿರು ಅಂತ ಬಂದಿಯೇ ಬಿಟ್ಟುತ್ತು" ಏಕೆಂದರೇ ಜಯಲಕ್ಷ್ಮಿಯು ತನ್ನ ಪಕ್ಕದ ಅಕ್ಕ –ತಂಗಿಯರ ಜೋತೆ ಇತ್ತೀಲ ಕಡೆ ಸೊಪ್ಪುತರಲು ಹೋದಳು , ಇತ್ತ ಮಾವ ಕುಡಿದ ಅಮಲಿನಲ್ಲಿ ಮನೆಗೆ ಬಂದ ಆ ಜಯಲಕ್ಷ್ಮಿಯ ಮೇಲೆ ಉಹಾತ್ಮಕ ಅನುಮಾನದಿಂದ ವಿಪರೀತವಾದ ಅಸಬ್ಯ ಪದಗಳಿಂದ ಎರಗಿದನು, ಗಂಡನಾದ ರವಿಯು ನಿಂದಿಸಿ ಹೊಡೆದನು. ಜಯಲಕ್ಷ್ಮಿಯು ದೇಹದ ಮೇಲಿನ ನೋವಿಗಿಂತ ತನ್ನ ಮೇಲಿನ ನಿಂದನೆಗೆ ನೋಂದು ತನಗೇ ತಿಳಿದ ನಾದನಿಯ ಆತ್ಮಹತ್ಯಯಂತೆ ,ಸೀಮೆಎಣ್ಣೆ ಸುರಿದು ಕೊಂಡು ಬೆಂಕಿ ಹಚ್ಚಿಕೊಂಡಳು ,ಆಗ ಅವಳಿಗೆ ತನ್ನಮಗ ಮಗಳು ನೆನಪಾಗಿ ತಾನು ಬದುಕಬೇಕೇಂದು ಚೀರುತ್ತಾ ಊರಿನ ಹೊರಗಡೆ ಬೋರುವೆಲ್ ಕಡೆ ಹೋಡಿ,ಬೋರವೆಲ್ ಹೊತ್ತಿ ,ನೀರು ಬರಿಸಿ ಬೆಂಕಿ ನಂದಿಸಲು ಮುಂದಾಗಿ ಕೊನೆಗೆ ಬದಿಯೊಳಗೆ ಬಿದ್ದಳು. ಅಂತು ಅಕ್ಕ –ಪಕ್ಕದ ಜನ ಅವಳನ್ನು ಬೆಂಕಿನಂದಿಸಿ ಅಸ್ಪತ್ರೆಗೆ ಸೇರಿಸಿದರು. ಕೊನೆಗೆ ಅವಳ ಸುಟ್ಟದೇಹ ಆಸ್ಪತ್ರೆಯಲ್ಲಿದ್ದರು . ಇತ್ತ ಗಂಡ ರವಿಯು ಕುಡಿದು ರಸ್ತೆಯಲ್ಲಿ ಬಿದಿದ್ದನು ಪೋಲಿಸರಿಂದ ತಪ್ಪಿಸಿಕೊಳ್ಳಲು ತನ್ನ ಕಾಲು ಮು–ರಿದಂತೆ ನಟನೆ ಮಾಡುತ್ತಿದ.ತನ್ನ ತಮ್ಮನಾದ ಚಿನ್ನಸ್ವಾಮಿ ತನ್ನ ಸಹೋದರಿಯನ್ನು ಉಳಿಸಿಕೊಳ್ಳಲು ದೇವರ ಪ್ರಾರ್ಥನೆ ಮಾಡುತ್ತ ಆಸ್ಪತ್ರೆಯಲ್ಲೆ ಊಟನಿದ್ರೆಯಿಲ್ಲದೆ ಆಸ್ಪತ್ರೆಯಲ್ಲಿಯೇ ಮೂರು ದಿನ ಕಳೆದರು, ಹೇಗೋ ತನ್ನ ಸಹೋದರಿ ಬದುಕಿದರೆ ಸಾಕು ಎಂಬ ಅಭಿಲಾಷೆದಿಂದ ಸಹೋದರ( ಚಿನ್ನಸ್ವಾಮಿ)ತನ್ನ ಓದುಗೆ ಕೂಡಿಟ್ಟ ಹಣದಿಂದ ಸಹೋದರಿಯ ಚಿಕಿತ್ಸೆಗೆ ಬಳಸಿದ, ಅದು ಫಲಕಾರಿಯಾಗದೆ ಸಾವಿಗೆ ಹತ್ತಿರವಾದ್ದಳು. ಸಾಯುವ ಸಂದರ್ಭದಲ್ಲಿ ತನ್ನ ಆಣ್ಣ,ಅಪ್ಪ,ಅಮ್ಮನ್ನು ತನ್ನ ಬಳಿ ಕರೆದು ಮಾತನಾಡಿ ಮತ್ತು ಹಾಗೇ ತನ್ನ ಅಣ್ಣನ್ನು ಕರೆದು ,ಕೈಯನ್ನು ಹಿಡಿದ್ದು ಇನ್ನು ಮುಂದೆ ನನ್ನ ಮಕ್ಕಳ ತಂದೆ, ತಾಯಿಯಾಗಿ ಪಾಲನೆ ಪೋಷಣೆ ಮಾಡಬೇಕು ಹಾಗೂ ಈ ಸಮಾಜಕ್ಕೆ ಒಳ್ಳೆಯ ಪ್ರಜೆಗಳಾಗಿ ರೂಪಿಸಬೇಕು ಎಂದು ತನ್ನ ಅಣ್ಣನ ಬಳಿ ಕೇಳಿಕೊಂಡಳು. ಹಾಗೇ ಬಿಟ್ಟತ್ತ ಕಣ್ಣಿನಲ್ಲಿ ತನ್ನ ಕೊನೆ ಉಸಿರು ಹೇಳೆದ್ದಳು.

ಆತ್ಮಹತ್ಯೆಗೆ ಪ್ರಯತ್ನಿಸಿದ್ದಾಗ ಸಮೀಪದಲ್ಲಿ ಅಳುತ್ತಿದ್ದ ತನ್ನ ಮಗವಿನ ಆಕ್ರಂದನ ಕೇಳಿ ಬದುಕ ಬೇಕೆಂಬ ಆಸೆಯಿಂದ ಬೊರವೆಲ್ ಹೊತ್ತುತ್ತಿದ ಘಟನೆ, ಬದ್ದಿಗೆ ಬಿದ್ದ ಸಂದರ್ಭ ಆ ತಾಯಿ ಮಕ್ಕಳ ಮೇಲಿನ ,ಪ್ರೀತಿ ,ಪ್ರೇಮವಾಗಿದೆ.

ಆತ್ಮಮಿಯರೇ "ಮುತ್ತುಕೊಟ್ಟೋಳೊ ಬಂದಾಗ ತುತ್ತುಕೊಟ್ಟೋಳ ಮರಿಬ್ಯಾಡ:" ಎಂಬ ಗಾದೆಯಂತೆ ಹೆಂಡತಿ ಮತ್ತು ತಾಯಿಯನ್ನು ಪರಸ್ಪರ ತಾವು ಭೇಧಭಾವ ಮಾಡದೆ ಸಹಕರಿಸಿ ಜೀವನ ನಡೆಸುವುದು ಉತ್ತಮ. ತಾಯಿಯನ್ನು ಕೀಳುಭಾವನೆಯಿಂದ ಕಂಡು ದೊಷಿಸುತ್ತ ಇತ್ತ ವಿವಿಧ ಕ್ಷೇತ್ರಗಳಲ್ಲಿ ತೀರ್ಥಯಾತ್ರೆ ಮಾಡುವುದು ದೇವರ ಕೃಪೆಗೆ ಪಾತ್ರರಾಗುದ್ದಿಲ್ಲ ಎಂದು ವೇದಗಳಲ್ಲಿ ತಿಳಿಸಿದ! ಬಯಸಿ ಬರುವ ಪ್ರೀತಿಗಿಂತ, ಬಯಸದೇ ಬರುವ ಪ್ರೀತಿಮೇಲು, ಕಾಣದ ದೇವರಿಗಿಂತ ಎದುರು ಇರುವ ತಾಯಿ ಮೇಲು, ಆಕಾಲೀಕ ಮರಣ ತಪ್ಪಲ್ಲ ಬಯಸಿದ ಮರಣ ತಪ್ಪು, ಬಡತನದಲ್ಲಿ ಹುಟ್ಟಿದ್ದು ತಪ್ಪಲ್ಲ ಬಡತನದಲ್ಲಿ ಸಾಯುವುದು ತಪ್ಪು. ...... ಆರ್.ವಿ.ಎಸ್

**– ಸಚ್ಚಿನ್ ಆರ್.ಬಿ.**

# ಕವನಗಳು

ರಾಜಕೀಯ

ಯಾರದೋ ಗದ್ದುಗೆ ಗುದ್ದಾಟಕ್ಕೆ
ಮೋಸದ ಆಟಕ್ಕೆ ಬಲಿಯಾಗುತ್ತಿರುವವರು ನಾವು
ಯಾವುದೇ ಬದ್ಧತೆಯಿಲ್ಲ
ರಾಜಕೀಯದ ಅರಿವಿಲ್ಲ
ಅಧಿಕಾರದ ಅರ್ಥವನ್ನೇ ತಿರುಚಿರುವಾಗ
ಯಾವುದು ಸತ್ಯ, ಯಾವುದು ಮಿಥ್ಯ?

ಕೊಟ್ಟ ಹೆಂಡಕ್ಕೆ, ಪುಡಿ ಗಾಸಿಗೆ
ತಮ್ಮ ತನವನ್ನೇ ಮಾರಿಕೊಂಡ ನಮಗೆ
ಸ್ವಾತಂತ್ರ್ಯದ, ಮತದ ಬೆಲೆಯನ್ನು ಅರಿಯದವರಿಗೆ
ಕಣ್ಣೆದುರೇ ಮೋಸವಾದರೂ ಅರಿಯುವರೆ
ಪ್ರಶ್ನಿಸಿ ಎದೆಯೊಡ್ಡಿ ನಿಲ್ಲುವರೆ?

ಭವಿಷ್ಯದ ಕನಸಿಲ್ಲ
ಬಡತನದ ಹಂಗಿಲ್ಲ
ತಲೆ ಬಾಗಿ ನಡೆಯುವುದನ್ನು ಇನ್ನೂ ಬಿಡಲಿಲ್ಲ
ಅರವತ್ತೊಂಬತ್ತು ತುಂಬಿದೆ ಸ್ವಾತಂತ್ರ್ಯಕ್ಕೆ
ಕೇವಲ ಆಚರಣೆಗೆ, ನೆನಪಿಗೆ

ಹೊಟ್ಟೆ ತುಂಬಿಸಿಕೊಳ್ಳುವ ಶಿಕ್ಷಣವಿಲ್ಲ
ದುಡಿಯುವವರಿಗೆ ಕೆಲಸವಿಲ್ಲ
ಶೋಷಣೆಗಳಿಗೆ ಮಿತಿಯಿಲ್ಲ
ಬಣ್ಣಗಳಿಂಗಿತ ಹೆಚ್ಚು ಜಾತಿಗಳಿರುವಾಗ
ಮನುಷ್ಯತ್ವವನ್ನು ಮರೆತು ವರ್ತಿಸುತ್ತಿರುವಾಗ

ಮೋಸದ ರಾಜಕೀಯದಲ್ಲಿ
ಪ್ರಜಾಪ್ರಭುತ್ವ ಸಿಕ್ಕಿದೆ
ಕತ್ತಲೆ ತುಂಬಿರುವಾಗ ಬೆತ್ತಲೆಗೆ ಅರ್ಥವಿದೆಯೇ?
ಸತ್ಯದ ಹಾದಿಯಲಿ ನಡೆಯುವವರ ಹುಡುಕಬೇಕಿದೆ
ಅವರೊಂದಿಗೆ ನಡೆಯಬೇಕಿದೆ...

**–ರವಿಕುಮಾರ್, ಮೈಸೂರು.**

ಸ್ನೇಹಿತೆಗಾಗಿ...
ಭೂಮಿಯಿಂದ ಬಂದ ಅದ್ಭುತ ನಿಧಿ
ನಿನಗಾಗಿ ಮೀಸಲು ಈ ಹೃದಯದ ಸನ್ನಿಧಿ
ಹೊಳೆಯುವಂತಹ ಮಾಣಿಕ್ಯ ನೀವು
ನಿನಗಾಗಿ ಯಾವ ಕಾಣಿಕೆ ನೀಡಲಿ
ಹೊಂಬೆಳಕಿನಲ್ಲಿ ಹೊಳೆಯುವಂತಹ ಮುತ್ತು
ನಿಮಗಾಗಿ ತರಲೇ ಅದ್ಭುತವಾದ ವಸ್ತು
ನಿಮ್ಮೆಯ ಮಾತು ಕಲ್ಮಶವಿಲ್ಲದ ಸವಿಮುತ್ತು
ಇದನ್ನು ಕೇಳಿ ನಾನು ಆಗೋದೇ ಸುಸ್ತು
ನಿಮ್ಮಯ ಮನಸ್ಸು ಜೇನಿಗಿಂತಲೂ ಸೊಗಸು
ಯಶಸ್ವಿಯಾಗಲಿ ನಿಮ್ಮ ಮುಂದಿನ ಕನಸು
ನಿಮಗಾಗಿಯೇ ಬರೆದ ಈ ಕವನ
ಮುಗುಸುವ ಮುನ್ನ ನಿಮಗೊಂದು ನಮನ..
–

# ಪ್ರಸ್ತುತ ಶಿಕ್ಷಣ, ಮಾದ್ಯಮ, ರಾಜಕೀಯ ಮಾರಾಟದ ವಸ್ತುವಾಗಿದೆ...

'ಪ್ರಸ್ತುತ ಶಿಕ್ಷಣ, ಮಾದ್ಯಮ, ರಾಜಕೀಯ ಮಾರಾಟದ ವಸ್ತುವಾಗಿದೆ...

'ವ್ಯವಹಾರಂ ದ್ರೋಹ ಚಿಂತನಂ' ಎಂಬ ನಾಣ್ಣುಡಿ ತುಂಬ ಕಾಲದಿಂದಲೂ ಜನರ ಬಾಯಲ್ಲಿ ಹಾಗೇ ಉಳಿದಿದೆ. ಕಾರಣ ಸತ್ಯವಾದ ವಾಕ್ಯಗಳಿಗೆ ಎಂದು ಸಾವಿಲ್ಲ ಎಂಬುದಾಗಿದೆ. ವ್ಯವಹಾರದಲ್ಲಿ ಯಾವುದೇ ವ್ಯಕ್ತಿ ಲಾಭಗಳಿಸಬೇಕೆಂದಾಗ ಆ ವ್ಯಕ್ತಿ ಅಥವಾ ಸಂಸ್ಥೆ ವ್ಯವಹಾರದಲ್ಲಿ ಮೋಸ ಮಾಡುವುದು ಸರ್ವೆ ಸಾಮಾನ್ಯ. ಆ ದೃಷ್ಟಿಯಿಂದ ವ್ಯವಹಾರಂ ದ್ರೋಹ ಚಿಂತನಂ ಎಂಬ ವಾಕ್ಯ ಪ್ರಸ್ತುತ ಪರಿಸ್ಥಿತಿಯಲ್ಲಿ ಶಿಕ್ಷಣ, ಮಾದ್ಯಮ,ರಾಜ–ಕೀಯ ವ್ಯವಸ್ಥೆಯ ಕುರಿತು ಹೇಳುವುದಕ್ಕೆ ಸೂಕ್ತವಾಗಿದೆ. ಹಿಂದಿನ ಶಿಕ್ಷಣ ವ್ಯ+ವಸ್ಥೆಯನ್ನು ಗಮನಿಸುವುದಾದರೆ ಗುರುಕುಲಗಳ ಮೂಲಕ ಋಷಿಮುನಿಗಳು ತಮ್ಮ ಜ್ಞಾನವನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಕಾರ್ಯವನ್ನು ಮಾಡುತ್ತಿದ್ದರು. ಕೇವಲ ಪಠ್ಯವನ್ನು ಅಷ್ಟೆ ಅವರು ಭೋಧಿಸುವುದಲ್ಲದೇ ಜೀವನದ ಮೌಲ್ಯಗಳನ್ನು ಬಿತ್ತುವ ಮತ್ತು ಪ್ರಯೋಗಿಕವಾಗಿ ಅವರಲ್ಲಿ ಅರಿವನ್ನು ಮೂಡಿಸಿ ಸಮಾಜವನ್ನು ಬೆಳಗುವ ದೀಪಾಗಳನ್ನಾಗಿ ಅವರು ಮಾಡುತ್ತಿದ್ದರು. ತಮ್ಮ ಜೀವನಕ್ಕೆ ಅಗತ್ಯವಾದ ಮೂಲ ಸೌಕರ್ಯಗಳ ಹೊರತು ಹೆಚ್ಚಿನದೇನನ್ನು ಬಯಸುತ್ತಿರಲಿಲ್ಲ. ಇಂದು ಜಾಗತೀಕರಣ, ಉದಾ–ರೀಕರಣ, ಖಾಸಗೀಕರಣದ ಅಳವಡಿಕೆಯಿಂದ ಅನೇಕ ಕ್ಷೇತ್ರಗಳಲ್ಲಿ ಬದಲಾವಣೆಯಾಗಿದೆ. ಅದು ಯಾವ ರೀತಿಯ ಬದಲಾವಣೆ, ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ವಿಮರ್ಶೆಮಾಡಿಕೊಳ್ಳುವುದು ಅಗತ್ಯವಾಗಿದೆ. ಶಿಕ್ಷಣವ್ಯವಸ್ಥೆಯಲ್ಲಿ ಸರ್ಕಾರಿ ಶಾಲಾ, ಕಾಲೇಜುಗಳಿಗಿಂತ ಖಾಸಗೀ ಶಾಲಾ, ಕಾಲೇಜುಗಳು ಹೆಚ್ಚಿವೆ. ಖಾಸಗಿಯ ಶಿಕ್ಷಣ ಸಂಸ್ಥೇಗಳ ಮುಖ್ಯ ಉದ್ದೇಶವೇ ಹಣಗಳಿಕೆಯಾಗಿದ್ದು, ಮಾತೃಭಾಷೆಗಿಂತ ಪರಭಾಷೆಯನ್ನು ಕಲಿಸುವ ನೆಪದಲ್ಲಿ ತಮ್ಮದಲ್ಲದ










ಸಂಸ್ಕೃತಿಯನ್ನು ಅಳವಡಿಸಿಕೊಂಡು. ಕೇವಲ ತೋರಿಕೆಗಷ್ಟೆ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ, ಧರ್ಮ, ಜಾತಿಗಳಿಗೆ ಒಂದೊಂದು ಪ್ರತ್ಯೇಕ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿ ಬೆಳೆಸುವ ಈ ವ್ಯವಾಹಾರಿಕ ಸ್ಥಿತಿಯಲ್ಲಿ ಶಿಕ್ಷಣ ನೀಡುವ ಸ್ಥಳವೇ ಲಾಭಗಳಿಸುವ ವ್ಯವಹಾರ ತಾಣಗಳಾಗಿರುವಾಗ ಅಲ್ಲಿ ಕಲಿಯುವ ವಿದ್ಯಾರ್ಥಿಗಳ ಮನಸ್ಥಿತಿ ದೇಶದ ಅಭಿವೃದ್ಧಿಯಲ್ಲಿ ಎಷ್ಟರಮಟ್ಟಿಗೆ ಪೂರಕವಾಗಿ ಇರಬಹುದು ಎಂಬುದನ್ನು ಯೋಚಿಸಬೇಕಿದೆ.

ಹಿಂದೆ ಮುದ್ರಣ ಹಾಗೂ ವಿದ್ಯುನ್ಮಾನ ಮಾದ್ಯಮಗಳನ್ನು ನಿರ್ಮಿಸಿ ಅವುಗಳನ್ನು ನಿರ್ವಹಿಸುವುದು ಕಷ್ಟವಾಗಿತ್ತು. ಅದೆಲ್ಲದರ ನಡುವೆಯೂ ಸಮಾಜವನ್ನು ಕಾವಲುನಾಯಿ, ವಿರೋಧಪಕ್ಷದಂತೆ ಆಡಳಿತ ಸರ್ಕಾರಗಳನ್ನು ಪ್ರಶ್ನಿಸಿ ಉತ್ತಮ ಕಾರ್ಯಗಳನ್ನು ಮಾಡುವಂತೆ ತಿಳಿಸುವುದರ ಜತೆಗೆ ಜನರಿಗೆ ಶಿಕ್ಷಣ, ಮಾಹಿತಿಯನ್ನು ನಿಖರವಾಗಿ ಒದಗಿಸುತ್ತಿದ್ದ ಮಾದ್ಯಮಗಳು ಇಂದು ಉದ್ಯಮಗಳಾಗಿವೆ. ವ್ಯವಹಾರಕ್ಕೆ ತೊಡಗಿದ ಮೇಲೆ ಮೋಸ ಮಾಡದೇ ಲಾಭಗಳಿಸಲು ಸಾಧ್ಯವೇ? ಸತ್ಯ ವರಧಿಗಳನ್ನು ಮರೆಮಾಚುವ, ಹಣಕ್ಕಾಗಿ ಪಕ್ಷಗಳನ್ನು ಉತ್ರೇಕ್ಷೆ ಮಾಡಿ ಹೊಗಳುವ, ತಪ್ಪುಗಳನ್ನು ಮುಚ್ಚಿಹಾಕುವ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ನಿಜಕ್ಕೂ ಮಾದ್ಯಮಗಳು ಮಾರಾಟದ ಸರಕುಗಳಾಗಿವೆ. ಕೆಲವು ರಾಜಕಾರಣಿಗಳು ತಮ್ಮದೇಯಾದ ವಾಹಿನಿಗಳನ್ನು, ಪತ್ರಿಕೆಗಳನ್ನು ತೆರೆದಿದ್ದು ತಮ್ಮ ತಪ್ಪುಗಳನ್ನು ಮುಚ್ಚಿಹಾಕಿ ತಮಗೆ ಬೇಕಾದ ಮಾಹಿತಿಗಳನ್ನು ಪಸರಿಸುವ ಕಾರ್ಯವು ನಡೆಯುತಿದೆ. ಈ ಎರಡು ಕ್ಷೇತ್ರಗಳು ಶಿಕ್ಷಣ ಮತ್ತು ಮಾದ್ಯಮ ಯಾವುದೊ ಒಬ್ಬ ವ್ಯಕ್ತಿಯ ವ್ಯಯಕ್ತಿಕ ಎಂದು ಭಾವಿಸಬಹುದು ಆದರೆ ರಾಜ–ಕೀಯ ಕ್ಷೇತ್ರವು ಇಂದು ಮಾರಾಟಕ್ಕಿರುವುದು ನಿಜಕ್ಕೂ ಶೋಚನಿಯವಲ್ಲದೇ ಮತ್ತೇನು ಅಲ್ಲವೇ? ರಾಜರ ಆಳ್ವಿಕೆ ಅಳಿದು ಪ್ರಜಾಪ್ರಭುತ್ವ ನಮ್ಮ ಕೈ ಸೇರಿದರು. ಇಂದು ರಾಜಕೀಯ ವ್ಯಕ್ತಿಗಳು ನೀಡುವ ಪುಡಿಗಾಸಿಗೆ, ಹೆಂಡಕ್ಕೆ, ಜಾತಿಯ ಸೋಂಕಿಗೆ ಜನರು ಒಳಗಾಗುತ್ತಿದ್ದಾರೆ. ಅಮೂಲ್ಯವಾದ ಪ್ರಜಾಪ್ರಭುತ್ವವನ್ನ ಎತ್ತಿ ಹಿಡಿಯುವ 'ಮತ'ಗಳನ್ನ 500, 1000 ರೂಪಾಯಿಗೆ, ಪಕ್ಷದ ಚೇಲಗಳ ಬಣ್ಣದ ಮಾತಿಗೆ ಮನಸೋತ ನೀಡುತ್ತಿರುವುದು ಮತಗಳನ್ನು ಕೊಂಡುಕೊಳ್ಳುವ ವ್ಯವಹಾರವಲ್ಲವೇ? ಈ ರೀತಿಯಾಗಿ ಹಣ ನೀಡಿ ಕೊಂಡುಕೊಂಡ ಮತಗಳ ರಾಜಕಾರಣೀಗಳು ರಾಜಕೀಯ ಕುರ್ಚಿಗಳಿಗಾಗಿ ಇತ್ತಿಷ್ಟು ಎಂದು ಪರದೆಯ ಹಿಂದಿನ ಬೊಂಬೆಯಾಟಗಳಂತೆ ಮಾರಾಟವಾಗುತ್ತಿರುವುದು ವ್ಯವಹಾರವಲ್ಲವೇ?

ಒಬ್ಬ ವ್ಯಕ್ತಿಗೆ ಶಿಕ್ಷಣವನ್ನು ನೀಡಿ, ಮೌಲ್ಯಗಳನ್ನು ಬೆಳೆಸುವ ಮೂಲಕ ಉತ್ತಮ ನಾಗ–ರೀಕರನ್ನಾಗಿ ಮಾಡುವ ಶಿಕ್ಷಣ ವ್ಯವಸ್ಥೆ, ಸಮಾಜದಲ್ಲಿ ನಡೆಯುವ ಸರಿ, ತಪ್ಪುಗಳನ್ನು ಗುರುತಿಸಿ ಸರಿದಾ–ರಿಯತ್ತ ನಡೆಯುವಂತೆ ದಾರಿ ತೋರುವ ಮಾದ್ಯಮ, ದೇಶದಲ್ಲಿ ಉತ್ತಮ ಯೋಜನೆಗಳನ್ನು ರೂಪಿಸಿ ದೇಶದ ಪ್ರಗತಿಗೆ ಕಾರಣವಾಗಬೇಕಾದ ರಾಜಕೀಯ ಈ ಮೂರು ಕ್ಷೇತ್ರಗಳು ಯಾವುದೇ ಫಲ, ಪೇಕ್ಷೆಯಿಲ್ಲದೇ ಸೇವೆಯನ್ನು ಸಲ್ಲಿಸಬೇಕಾದ ಪರಿಸ್ಥಿತಿಯಲ್ಲಿ ಶಿಕ್ಷಣ, ಮಾದ್ಯಮ, ರಾಜ–ಕೀಯ ಕ್ಷೇತ್ರಗಳು ಮಾರಾಟದ ಸರಕುಗಳಾಗಿರುವುದು ಸತ್ಯವಲ್ಲವೇ?

ಮುಂದಾದರೂ ಈ ಕ್ಷೇತ್ರಗಳು ತಮ್ಮ ಮಾರ್ಗವನ್ನು ಅರಿತು ನಡೆಯದಿದ್ದರೆ ದೇಶದ ಪ್ರಗತಿ ಕೇವಲ ಪ್ರಶ್ನೆಯಾಗಿ ಉಳಿಯುವುದು ಖಂಡಿತ ಅಲ್ಲವೇ?

**–ಡಿ.ರವಿಕುಮಾರ್,**

## ನಾ ಕಂಡ ಸೈನಿಕ...

ದೇಶದಲ್ಲಿ ರಾಜಕೀಯದ ಸೀಟ್‌ಗಳಿಗೆ ಯಾಕೆ. ಬಸ್ಸ್ ಸೀಟ್‌ಗಳಿಗೂ ಕಚ್ಚಾಡಿ ಗುದ್ದಾಡುವ ಜನರು ನಮ್ಮ ಸುತ್ತ–ಮುತ್ತ ದಿನ ಕಾಣಬಹುದು. ನಾನೀಗ ಹೇಳ ಹೊರಟಿರುವುದು ದೇಶವನ್ನು ಆಚರಣೆಗಳಲ್ಲಿ ಮಾತ್ರ ಸ್ಮರೀಸಿ ನಂತರ ಎಲ್ಲವನ್ನು ಮರೆತು ತಮ್ಮ ತಮ್ಮ ಮನೆಯ ರಾಮಾಯಣ, ಮಹಾಭಾರತ ಕಥ–'ಗಳಲ್ಲಿ ವಿಶಿಷ್ಟ ಪಾತ್ರಗಳಂತ್ತೆ ಜೀವನ ನಡೆಸುವವರ ನಡುವೆ ದೇಶದ ಕನಸು ಹೊತ್ತು ಅದರ ಸೇವೆಗಾಗಿ ತನ್ನ ಊರು, ಕುಟುಂಬ, ಸ್ನೇಹಿತರು ಎಲ್ಲರನ್ನು ಬಿಟ್ಟು ದೇಶ ದೇಶಾಭಿಮಾನದಿಂದ ಅದರ ರಕ್ಷಣೆಗೆ ಎಲ್ಲವನ್ನು ತೊರೆದು ಮೃದು ಮನಸ್ಸನ್ನು ಕಲ್ಲಾಗಿಸಿಕೊಂಡು ಉತ್ತಮ ಧ್ಯೇಯದೊಂದಿಗೆ ಹೋರಾಡುವ, ಹೋರಾಡುತ್ತಲೆ ಮಡಿವ ಎಷ್ಟೊ ನಿಷಕಲ್ಮಷ ಜೀವಗಳಿಗೆ ಒಂದು ಸಲಂ..

ದೇಶದ ಒಳಗೆ ನನ್ನ ಜನ ಚೆನ್ನಾಗಿರಲಿ ಎಂದು ಹಗಲು ರಾತ್ರಿ ಸೈನಿಕ ಎಂಬ ಹೆಸರಲ್ಲಿ ದುಡಿಯುವ ಸೈನಿಕ: ಭೂಮಿತಾಯಿಯ ಮಗ ರೈತನಿಗೆ ಸಮ. ರೈತ ಭೂಮಿಯಲ್ಲಿ ನಿಷ್ಠೆಯಿಂದ ಬಿಸಿಲು ನೆರಳು ಎನ್ನದೆ ದುಡಿದು ದೇಶಕ್ಕೆ ಅನ್ನ ನೀಡುವ ಮಗನಾದರೆ ಸೈನಿಕ ದೇಶದ ರಕ್ಷಣೆಗಾಗಿ ದುಡಿಯುವವ ನಾಗಿದ್ದಾನೆ. ನಾನು ಮೈಸೂರಿನಿಂದ ಕೆ.ಆರ್.ನಗರಕ್ಕೆ ರೈಲಿನಲ್ಲಿ ಪ್ರಯಾಣಮಾಡಲು ರೈಲ್ವೇಸ್ಟೇಷನ್ ಬಳಿ ಕಾದು ಕುಳಿತ ಸಂದರ್ಭ ಆಕಸ್ಮಿಕವಾಗಿ ಕಂಡಿದ್ದು ಆ ನನ್ನ (21) ವಯಸ್ಸಿನ ಸೈನಿಕ ಆ ಬಟ್ಟೆ, ಆ ನೋಟ ಅವನು ಸೈನಿಕ ಎಂದು ಒತ್ತಿ ಹೇಳುವಂತಿತ್ತು ಆತನನ್ನು ಎಲ್ಲಿಯೊ ದೇಶದ ಗಡಿಭಾಗಕ್ಕೆ ಕರೆದುಕೊಂಡು ಹೋಗುತ್ತಿದ್ದರು ಎಂದು ನನ್ನ ಭಾವನೆ. ಅವನು ನನ್ನ ನೋಡುತ್ತಿದ್ದ ನನಗೆ ಆತನನ್ನು ಮಾತನಾಡಿಸಬೇಕು ಎಂದು ಅನಿಸಿದರು, ಆತನ ಸುತ್ತಾ ಇನ್ನು ಮೂವರು ಅಧಿಕಾರಿಗಳು ಇದ್ದರು ಹಾಗಾಗಿ ಹೋಗಲಿಲ್ಲ. ಆದರೂ ಆತನ ಕಣ್ಣು ಎಲ್ಲವನ್ನು ಹೇಳುತಿತ್ತು ದೇಶದ ಬಗ್ಗೆ ಆತನಿಗೆ ಆಧ್ಯಮ್ಯ ಪ್ರೀತಿಯಿದ್ದರು ತನ್ನ ಕುಟುಂಬ,ಸ್ನೇಹಿತರನ್ನು ಬಿಟ್ಟು ಹೋಗುವ ಸಂಧರ್ಭ ಎಂತವರಲ್ಲಿಯೂ ಕಣ್ಣಲ್ಲಿ ನೀರು ತರಿಸುವುದು ಸಹಜ ಆತ ಆಳುತ್ತಿದ್ದನ ಇಲ್ಲ 'ಮೌನ' ಅಧಿಕಾರಿಗಳು ಸೈನಿಕನಿಗೆ ತಿನ್ನಲು ಮಲಗಲು ಉತ್ತಮ ಸ್ಥಳ ವ್ಯವಸ್ಥೆ ಮಾಡಿದ್ದರು ಎಂದು ನನಗೆ ಅನಿಸಿದರು, ಆತ ಆ ಕ್ಷಣದಲ್ಲಿ ತುಂಬ ಭಾವುಕನಾಗಿದ್ದ ರೈಲು ಹೊರಡುವ ಸಮಯವಾಗುತ್ತಲೆ ಒಳಗೆ ಹೋದ. ಇಂದು ಕಾಡುತ್ತಿದೆ ಆತನು ನನ್ನ ಬಳಿ ಏನಾದರು ಹೇಳಬೇಕಿತ್ತ. ಹೇಳಲು ನಾನು ಅವನಿಗೆ ಪರಿಚಯವಿಲ್ಲ ಹೇಳಿದರೆ ಏನು ಹೇಳಬಹುದಿತ್ತು ನಾನು ದೇಶಕಾಯುವುದಕ್ಕೆ ಹೋಗುತ್ತಿದ್ದೆನೆ ನೀನು ನನ್ನ ಕುಟುಂಬ ಜನರನ್ನು ಕಾಯುವೆಯ ಎನ್ನತ್ತಿದ್ದನ ಎಂಬ ನನ್ನಲ್ಲಿಯೇ ಉಳಿಯಿತು. ಹೀಗೆ ದೇಶಕ್ಕಾಗಿ ಜೀವದ ಹಂಗ್ಗಿಲದೇ ಹೋಗುವು ದೇಶಪುತ್ರರ ನೆನೆಯುವ ಗೌರವಿಸುವ.

**–ಡಿ.ರವಿಕುಮಾರ್,**

## ‘ಟೆಕ್ನಿಕ್ಸ್–2017’ ಮೂರು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮ ಸಡಗರ



ಮೈಸೂರು: ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಹಾಗೂ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ಕಾಲೇಜಿನ ಆವರಣದಲ್ಲಿರುವ ಡೈಮಂಡ್ ಜೂಬ್ಲಿ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಗುರುವಾರ ಆಯೋಜಿಸಲಾಗಿದ್ದ ಟೆಕ್ನಿಕ್ಸ್–2017 ಮೂರು ದಿನಗಳ ಸಾಂಸ್ಕೃತಿ–ಕ ಕಾರ್ಯಕ್ರಮವನ್ನು ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮೈಸೂರಿಗೆ ಪಾರಂಪರಿಕ ನಗರಿ ಎಂದು ಕರೆಸಿಕೊಳ್ಳಲು ಯದು ವಂಶದ ಒಡೆಯರ್ ಕುಟುಂಬದವರ ಕೊಡುಗೆ ಮಾತ್ರವಲ್ಲದೇ ಇಲ್ಲಿನ ಪ್ರತಿಯೊಬ್ಬ ನಾಗರಿಕರ ಶ್ರಮವು ಇದೆ ಎಂದು ಹೇಳಿದರು.

ಮೈಸೂರು ಉತ್ತಮ ಪರಂಪರೆ, ಸಂಸ್ಕೃತಿಯನ್ನು ಹೊಂದಿದ್ದು, ಅದನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಕರ್ತವ್ಯ ಇಂದಿನ ಯುವ ಸಮುದಾಯದ ಮೇಲಿದೆ ಎಂದ ಅವರು, ‘ನಾವು ಎಲ್ಲಿಂದ ಬಂದಿದ್ದೇವೆ ಎಂಬುದು ಮುಖ್ಯವಲ್ಲ, ಯಾವ ದಾರಿಯಲ್ಲಿ ಸಾಗುತ್ತಿದ್ದೇವೆ ಎಂಬುದು ಮುಖ್ಯ’ ಎಂಬ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೇಳಿಕೆಯನ್ನು ಉಲ್ಲೇಖಿಸಿದರು.

ಮೂರು ದಿನಗಳ ಈ ಕಾರ್ಯಕ್ರಮದಲ್ಲಿ ರಾಜ್ಯಾದಾದ್ಯಂತ ಇಂಇಜಿನಿಯರಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದು, ಮೊದಲ ದಿನವಾದ ಇಂದು ಮ್ಯೂಸಿಕಲ್ ವಾಕ್, ಡ್ಯಾನ್ಸ್ ಫೇಸ್ ಆಫ್, ಕಾಲೇಜ್ ಬ್ಯಾಂಡ್ ಮತ್ತು ಬೀಟ್ ಗುರೂಸ್ ಕಾರ್ಯಕ್ರಮ ನಡೆಯಲಿದೆ. ಎರಡನೇ ದಿನ ಕರುಣಾಮಯಿ ಫೌಂಡೇಶನ್ ಮಕ್ಕಳಿಂದ ನೃತ್ಯ ಕಾರ್ಯಕ್ರಮ, ಪ್ರಹ್ಲಾದ್ ಆಚಾರ್ಯ ಅವರಿಂದ ನೆರಳು ಬೆಳಕಿನಾಟ, ಜಯಂತ್ ಬೆಳ್ಳೂರ್ ಅವರಿಂದ ಮಿಮಿಕ್ರಿ, ವುಶು ಸಂಘದಿಂದ ವುಶು ಕಾರ್ಯಕ್ರಮ, ಆಶ್ರೀತ ಮತ್ತು ಅಶ್ವಿಲ್‌ರಿಂದ ವಿಶ್ಯುಯಲ್ ಬೀಟ್ ಕಿಲ್ ಕಾರ್ಯಕ್ರಮವಿರುತ್ತದೆ. ಮೂರನೇ ದಿನ ವಿದ್ಯಾರ್ಥಿಗಳಿಂದ ಫ್ಯಾಶನ್ ಶೋ, ಡ್ರಾಮಾ ಜ್ಯೂನಿಯರ್ಸ್ ಹಾಗೂ ತಿಲಕ್ ಭಟ್ ಅವರಿಂದ ವೇಗ ಚಿತ್ರಕಲೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಉಸ್ತುವಾರಿ ಪ್ರಾಂಶುಪಾಲ ಡಾ. ಆರ್.ಗೋಪಾಲ ಕೃಷ್ಣೇ ಅರಸ್, ಎನ್‌ಐಇ ಬೋರ್ಡ್ ಆಡಳಿತಾಧಿಕಾರಿ ಹಾಗೂ ಗೌರವಾನ್ವಿತ ಕಾರ್ಯದರ್ಶಿ ಜಿ.ಎಸ್.ರಾಮಚಂದ್ರ, ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶಾವ್ನಾ ರಾಜ್, ಧನ್ಯ ಕೆ.ಪಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳ ಪ್ರತಿಭೆ ಪ್ರದರ್ಶನಕ್ಕೆ ಇದು ಉತ್ತಮ ವೇದಿಕೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಿ. ಎಂದು ಡಾ. ಆರ್. ಗೋಪಾಲ ಕೃಷ್ಣೇ ಅರಸ್, ಉಸ್ತುವಾರಿ ಪ್ರಾಂಶುಪಾಲರು ಹೇಳಿದರು.

**– ರಾಜು**

## ಕೆಎಸ್‌ಎನ್ ಯುವಕರಿಗೆ ಮಾದರಿ–ದೊಡ್ಡರಂಗೇಗೌಡ



ಜಾಗತೀಕರಣದ ಪ್ರಪಂಚದಲ್ಲಿ ಸಂಬಂಧಗಳು ಹುಸಿಯಾಗುತ್ತಿದೆ, ವ್ಯಕ್ತಿತ್ವಗಳು ಅದೃಶ್ಯ ಕಬ್ಬಿಣ ಸರಳುಗಳಿಂದ ಭದ್ರಪಡಿಸಿದ ದ್ವೀಪವಾಗುತ್ತಿದೆ. ಎಫ್‌ಬಿ, ವಾಟ್ಸಾಪ್ ಯುಗದಲ್ಲಿ ದಾಂಪತ್ಯ ಗೀತೆಗಳ ಮೂಲಕ ಜೀವನ ಪ್ರೀತಿಯನ್ನು ತಿಳಿಸಿದ ಕೆ.ಎಸ್.ನರಸಿಂಹಸ್ವಾಮಿ ಅವರು ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ ಎಂದು ಸಾಹಿತಿ ದೊಡ್ಡರಂಗೇಗೌಡ ಹೇಳಿದರು.

ಗ್ರಾಮಾಂತರ ಬುದ್ಧಿಜೀವಿ ಬಳಗದ ವತಿಯಿಂದ ನಗರದ ಎಂಜಿನಿಯರ್ ಸಂಸ್ಥೆಯ ಸಭಾಂಗಣದಲ್ಲಿ ಸಂಸ್ಥೆಯ 31ನೇ ವಾರ್ಷಿಕೋತ್ಸವದ ಅಂಗವಾಗಿ ಪ್ರೇಮಕವಿ ಕೆಎಸ್‌ನ ನೆನಪಿನ ರಾಜ್ಯಮಟ್ಟದ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿತರಾಗಿ ಅವರು ಮಾತನಾಡಿದರು.

ಇಂದು ಎಲ್ಲವು ಕೃತಕ ಜಗತ್ತಾಗುತ್ತಿದೆ. ಆಹಾರವೂ ಸೇರಿದಂತೆ ಮಾತುಕತೆಗಳು ಕೃತಕಗೊಂಡಿವೆ. 5 ಸಾವಿರ ವರ್ಷಗಳಿಂದ ಭಾರತ ಮೈಗೂಡಿಸಿಕೊಂಡಿದ್ದ ಪ್ರೇಮ, ಕರುಣೆಯ ಸಂಸ್ಕಾರಗಳು ಇಂದು ಕಣ್ಮರೆಯಾಗುತ್ತಿದೆ. ಈ ಸಂದರ್ಭದಲ್ಲಿ ಕೆಎಸ್‌ಎನ್ ಕವಿತೆಗಳು, ಕೃತಿಗಳು ಕನ್ನಡಿಗರಿಗೆ ಸತ್‌ಪ್ರೇರಣೆಯಾಗಿದೆ. ಅವರ ಕವಿತೆಗಳಿಂದ ಹಳ್ಳಿಯ ಸೊಗಡು, ಹಳ್ಳಿಯ ಸಂಬಂಧಗಳು ಇಂದು ಮರುಹುಟ್ಟು ಪಡೆಯಬೇಕಿದೆ ಎಂದು ಅವರು ಆಶಿಸಿದರು.

ನವೋದಯ ಘಟ್ಟದ ಕವಿಗಳಲ್ಲಿ ಸುವರ್ಣಾಕ್ಷರದಲ್ಲಿ ಬರೆಯಬೇಕಾದ ಹೆಸರೆಂದರೆ ಅದು ಕೆಎಸ್‌ಎನ್ ಅವರದು. ಅವರ ಕವನಗಳಲ್ಲಿ ಸಾಂಸ್ಕೃತಿಕ ಸಂಸರ್ಗತೆ ಇದೆ. ಅವರು ತಮ್ಮನ್ನು ಪ್ರೇಮ ಕವಿ ಎನ್ನದೆ ದಾಂಪತ್ಯ ಕವಿ ಎಂದು ಕರೆದುಕೊಳ್ಳುತ್ತಿದ್ದರು. ಇಂದಿನ ಯುವ ಪೀಳಿಗೆ ಪ್ರೀತಿ ಎಂದರೆ ತ್ಯಾಗ, ಸಂಬಂಧ ಶಾಶ್ವತ ಎಂಬುದನ್ನು ಅವರ ಕವನಗಳ ಮೂಲಕ ಅರಿತುಕೊಳ್ಳಬೇಕು ಎಂದು ತಿಳಿಸಿದರು.

ಕೆ.ಎಸ್.ನರಸಿಂಹಸ್ವಾಮಿ ಜಾನಪದ ಕವಿಯಂತೆ ಸಹಜ ಕವಿ ಅವರ ಮೈಸೂರು ಮಲ್ಲಿಗೆ ಕವನ ಸಂಕಲನ 31 ಬಾರಿ ಮರು ಮುದ್ರಣಗೊಂಡಿರುವುದು ಅವರ ಜನಪ್ರಿಯತೆಗೆ ಸಾಕ್ಷಿ. ದಿನನಿತ್ಯದ ಜಂಜಾಟಕ್ಕೆ, ಪ್ರೇಮಕ್ಕೆ, ವಿರಹಕ್ಕೆ ಕಾವ್ಯ ರೂಪ ನೀಡಿ ಜೀವಂತಿಕೆಯ ಕವಿ ಎನಿಸಿದರು ಎಂದರು.

### ಇಂಗ್ಲಿಷ್ ವ್ಯಾಮೋಹ ಬಿಡಿ

ಇಂದು ಕನ್ನಡ ವಿಶ್ವಮುಖಿಯಾಗುತ್ತಿದೆ. ಪ್ರಪಂಚದ ವಿವಿಧೆಡೆ ನೆಲೆಸಿರುವ ಕನ್ನಡಿಗರು ಕನ್ನಡ ಸಂಘಗಳನ್ನು ಸ್ಥಾಪಿಸುವ ಮೂಲಕ ಕನ್ನಡ ಪ್ರಪಂಚದಲ್ಲೆಲ್ಲ ಹರಡಿದೆ. ಆದರೆ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರೆ ಕಡಿಮೆಯಾಗುತ್ತಿದ್ದಾರೆ ಎಂದು ಅವರು ವಿಷಾದಿಸಿದರು.

ಆಂಗ್ಲ ಭಾಷೆ ಅನ್ನದ ಭಾಷೆ, ನೌಕರಿಯ ಭಾಷೆ ಎಂದು ಆಂಗ್ಲ ವ್ಯಾಮೋಹಿಗಳು ಹೆಚ್ಚಾಗುತ್ತಿದ್ದಾರೆ. ಕನ್ನಡದ ಬಗ್ಗೆ ತಾತ್ಸಾರ ಬಿಡಿ, ಕನ್ನಡದಿಂದಲೇ ನಾನು 14 ಬಾರಿ ವಿಶ್ವ ಸುತ್ತಿದ್ದೇನೆ. ಇಂಗ್ಲಿಷ್ ಭ್ರಮೆ ಬಿಟ್ಟು ಕನ್ನಡವನ್ನು ಬೆಳೆಸುವ ಕಾರ್ಯ ಆಗಲಿ ಎಂದರು.ಇಂದಿನ ಪೀಳಿಗೆ ಕನ್ನಡ ಸೇ–ರಿದಂತೆ ಯಾವ ಭಾಷೆಯನ್ನು ಸರಿಯಾಗಿ ಬಳಸುತ್ತಿಲ್ಲ. ಕನ್ನಡ ಬರವಣಿಗೆಯನ್ನು ನೋಡಿದರೆ ವೈಶಂಪಾಯನ ಸರೋವರದಲ್ಲಿ ಬಿದ್ದಂತೆ ಭಾಸವಾಗುತ್ತದೆ. ಸಿನಿಮಾ ಮಂದಿ ಗೀತೆ ರಚಿಸಲು, ಚಿತ್ರಕ್ಕೆ ಶೀರ್ಷಿಕೆಯನ್ನು ಸಂಸ್ಕಾರದ ತಿಳುವಳಿಕೆ ಇರಬೇಕು ಎಂದು ಅವರು ಕಿವಿಮಾತು ಹೇಳಿದರು.

ಕುವೆಂಪು, ಕೆಎಸ್‌ಎನ್, ಬೇಂದ್ರೆ ಅವರ ಕವನಗಳನ್ನು ಒಮ್ಮೆ ಸಿನಿಮಾ ಮಂದಿ ತಿರುವು ಹಾಕಿದರೆ, ಸಾವಿರ ಸಾವಿರ ಸಾವಿರದ ಶೀರ್ಷಿಕೆಗಳನ್ನು ಪಡೆಯಬಹುದು. ನೆಲದ ಗುಣ, ಪರಂಪರೆಯ ಅರಿವು ಇರಬೇಕಾದ್ದು ಅವಶ್ಯ ಎಂದು ಅವರು ತಿಳಿಸಿದರು.

### ಪೋಲಿಸರನ್ನು ವಜಾಗೊಳಿಸಿ

ಮಹದಾಯಿ ತೀರ್ಪನ್ನು ವಿರೋಧಿಸಿ ಕರೆ ನೀಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡವರನ್ನು ಪೋಲಿಸರು ಉಪಚರಿಸಿದ ರೀತಿ ಅಮಾನವೀಯ. ಪೋಲಿಸರು ಹಿಟ್ಲರ್‌ನಂತಾಗ ಬೇಡಿ, ಮಾನವೀಯತೆ ಮೈಗೂಡಿಸಿಕೊಳ್ಳಿ. ನಿಮಗೆ ದೌರ್ಜನ್ಯ ಮಾಡಲು ಅನುಮತಿ ಕೊಟ್ಟವರು ಯಾರು ಎಂದು ಅವರು ಪ್ರಶ್ನಿಸಿದರು.

ಕನ್ನಡಿಗರಿಗೂ ಒಂದು ತಾಳ್ಮೆ ಇದೆ, ಜನರು ರೊಚ್ಚಿಗೆದ್ದು ನಿಮ್ಮ ಲಾಠಿಯಿಂದಲೆ ತಿರುಗಿಸಿ ಹೊಡೆದರೆ ಏನು ಮಾಡುವಿರಿ. ಜನಶಕ್ತಿಯ ಮುಂದೆ ಯಾವ ಮಿಲಿಟರಿ ಪಡೆ ಬಂದರೂ ನೀವೂ ಅಡಗಿಕೊಳ್ಳಲೂ ಸಾಧ್ಯವಿಲ್ಲ. ಕೂಡಲೇ ಅಮಾನವೀಯವಾಗಿ ವರ್ತಿಸಿದ ಪೋಲಿಸ್‌ರನ್ನು ವಜಾ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಕೆಎಸ್‌ಎನ್ ಮಾದರಿ ಗ್ರಾಮ ನರಸಿಂಹಸ್ವಾಮಿ ಅವರ ಕವನಗಳಲ್ಲಿ ಕಂಡು ಬಂದಿದ್ದ ಹಳ್ಳಿಯ ಸೊಗಡನ್ನು, ಸಂಸ್ಕೃತಿಯನ್ನು ನಿರ್ಮಾಣ ಮಾಡುವ ಮೂಲಕವಷ್ಟೆ ಅವರಿಗೆ ಕೊಡಗೆ ನೀಡಬಹುದು. ಕೆಎಸ್‌ಎನ್ ಅವರ ಕಿಕ್ಕೇರಿಯೂ ಸೇರಿದಂತೆ ಒಂದು ಗ್ರಾಮವನ್ನು ಕೆಎಸ್‌ಎನ್ ಮಾದರಿ ಗ್ರಾಮವನ್ನಾಗಿ ರೂಪಿಸಬೇಕಿದೆ. ಯಾರಾದರೂ ಸಂಸದರು ಹೊಣೆಯನ್ನು ಹೊತ್ತು ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಲಿ ಎಂದರು.

ಕವಿ ಡಾ. ಲತಾ ರಾಜಶೇಖರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಇದೇ ವೇಳೆ ಸಿಪಿಕೆ ಅವರನ್ನಿ ಸನ್ಮಾನಿಸಿಸಲಾಯಿತು.

ಭೇರ್ಯ ರಾಮ್‌ಕುಮಾರ್ ಸಂಪಾದಕತ್ವದ ಕೆಎಸ್‌ನ–101, ಮಹಾಬಲ ಅವರ ಹಾಸ್ಯಬಂಧ, ಮಿರ್ಲೆ ಚಂದ್ರಶೇಖರ್ ಅವರ ಬದುಕೇ ಆಂದೋಲನ, ವಿ.ವೆಂಕಯ್ಯಬಾಚಹಳ್ಳಿ ಅವರ ಇಅದನರಿತು ನಡೆದರೆ ಸುಖ ಬಾಳು, ಡಾ.ಜಿ.ಡಿ.ಜೋಷಿ ಅವರ ಕೊನೆಯ ನಿಮಿಷ, ಕನ್ನಡ ಕುಲಭೂಷಣರು, ಬಿ.ತಮ್ಮಯ್ಯ ಅವರ ಸಜ್ಜನರು, ನಾಲ್ಕು ಪ್ರೇಮಕತೆಗಳು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಪ್ರೊ.ಎಚ್ಚೆಸ್ಕೆ ನೆನಪಿನ ಸಾಹಿತ್ಯ ಪ್ರಶಸ್ತಿಯನ್ನು ಮುಂಬೈನ ಶಾರದಾ ಎ. ಅಂಚನ್, ಕಾಸರಗೋಡಿನ ಪ್ರಭಾವತಿ ಕೆದಿಲಾಯ, ಪತ್ರಕರ್ತ ಈಶ್ವರಪ್ಪ, ವಿಶ್ವಮಾನ್ಯ ಕನ್ನಡಿಗ ಪ್ರಶಸ್ತಿಯನ್ನು ಎ.ಹೇಮಗಂಗಾ ಕೆ.ಜೆ.ಚಂಪಾವತಿ, ಬಿ.ವೇದಾವತಿ, ಕೆ.ಆರ್.ಸುನೀತಾ, ಗೀತಮ್ಮ, ಯಶೋಧ, ಅನಿತಾ ಶುಭಾಕರ್, ಕೆ.ಎಸ್.ಕಾಂಚನಾ, ಡಾ.ಎಚ್. ಎಸ್.ವಿಶ್ವನಾಥ್, ಡಿ.ಟಿ.ಪ್ರಕಾಶ್ ಹಾಗೂ ಪ್ರೇಮ ಕವಿ ಕೆ.ಎಸ್.ನ ನೆನಪಿನ ಪುರಸ್ಕಾರವನ್ನು ಸಾಧಕರಿಗೆ ನೀಡಿ ಗೌರವಿಸಲಾಯಿತು.ಹಿರಿಯ ಸಾಹಿತಿ ರಾಮಚಂದ್ರ ಎಸ್. ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಸಾಹಿತಿ ಡಾ.ಜಿ.ಡಿ.ಜೋಷಿ, ಲೇಖಕ ಬನ್ನೂರು ಕೆ. ರಾಜು, ಸಾಹಿತಿ ಭೇರ್ಯ ರಾಮ್‌ಕುಮಾರ್, ಕವಿ ಪುಷ್ಪಾ ಅಯ್ಯಂಗಾರ್, ಮಕ್ಕಳ ತಜ್ಞ ಡಾ.ಎಚ್.ಬಿ. ರಾಜಶೇಖರ್‌ಸಾಹಿತಿ ಮಹಾಬಲ ಇದ್ದರು

**.– ಸಚ್ಚಿನ್.ಆರ್.ಬಿ.**

## ಕನ್ನಡ ಸಾಹಿತ್ಯವು ಸಾಂಸ್ಕೃತಿಕ ಅನುಸಂಧಾನಕ್ಕೆ ಒಳಪಡುವುದ ಉತ್ತಮ ಕಾರ್ಯ



ಮೈಸೂರು,ಜು.28– ಕನ್ನಡ ಸಾಹಿತ್ಯವು ಸಾಂಸ್ಕೃತಿ–ಕ ಅನುಸಂಧಾನಕ್ಕೆ ಒಳಪಡುವುದರಿಂದ ಕನ್ನಡ ಸಾಹಿತ್ಯವನ್ನು ಮತ್ತೆ, ಮತ್ತೆ ಓದಿಸುವಂತಹ, ವಿಮರ್ಶಿಸುವಂತಹ ಕಾರ್ಯವಾಗುವುದು ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಪದ್ಮಾ ಶೇಖರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರು ವಿವಿಯ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಮತ್ತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಗುರುವಾರ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪದವಿ ಕಾಲೇಜು ಮತ್ತು ವಿಶ್ವ ವಿದ್ಯಾನಿಲಯಗಳ ಸಹಾಯಕ ಪ್ರಾಧ್ಯಾಪಕರುಗಳಿಗಾಗಿ ವ್ಯವಸ್ಥೆಗೊಳಿಸಿದ್ದ 42ನೆಯ ಕನ್ನಡ ಪುನಶ್ಚೇತನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಹಿತ್ಯವನ್ನು ವಿಶಿಷ್ಟ ರೀತಿಯ ಗ್ರಹಿಕೆಯಿಂದ ಅಧ್ಯಯನಕ್ಕೆ ಒಳಪಡಿಸಲು ಮತ್ತು ಕಾಲಘಟ್ಟ, ಸಾಮಾಜಿಕ ಸ್ಥಿತಿ, ಅಭಿವ್ಯಕ್ತಿ ಹೀಗೆ ಭಿನ್ನನೆಲೆಯಲ್ಲಿ ಅಂತರಂಗದಿಂದ ಅರಿಯಲು ಸಾಧ್ಯವಾಗುವುದು. ಕನ್ನಡ ಸಾಹಿತ್ಯವು ಬೃಹತ್ ಪರಂಪರೆಯನ್ನು ಒಳಗೊಂಡಿದ್ದು. ಸದಾ ಜೀವಂತವಾಗಿದೆ. ಸಾಹಿತ್ಯವು ನಿರಂತರ ಸಂವಹನವಾಗಿದ್ದು ಸಮಕಾಲೀನ ಅರಿವುಗಳನ್ನು ತಿಳಿಸುವುದಾಗಿದೆ. ಸಾಹತ್ಯದ ಮುಂದಿನ ಭವಿಷ್ಯದ ಇತಿಹಾಸವನ್ನು ಅರಿಯಲು ಕನ್ನಡ ಸಾಹಿತ್ಯ ಸಾಂಸ್ಕೃತಿಕ ಅನುಸಂಧಾನದಿಂದ ಸಾಧ್ಯವಿದೆ. ಕನ್ನಡ ಸಾಹಿತ್ಯದಲ್ಲಿ ಜೈನ ಧರ್ಮವು ಮೊದಲು ಸಾಹಿತ್ಯ ರಚನೆಯಲ್ಲಿ ತೊಡಗಿದೆ. ಜೈನ ಕವಿಗಳು ಅಹಿಂಸೆ, ಜೀವನ ಪ್ರೀತಿ, ಲೋಭವಿಲ್ಲದ ವೈರಾಗ್ಯವನ್ನು ಸಾಹಿತ್ಯದಲ್ಲಿ ತಿಳಿಸಿದ್ದಾರೆ. ಸಾಹಿತ್ಯವನ್ನು ಸಂಸ್ಕೃತಿಕರಣಗೊಳಿಸಿರುವುದಲ್ಲದೇ, ಜೀವನದಲ್ಲಿ ಸಂತೋಷ ಮತ್ತು ನಿರಾಶಕ್ತಿಯನ್ನು ತಿಳಿಸಿದ್ದಾರೆ. ಹಿಂದಿನ ಕವಿಗಳು ಹೊಸದನ್ನು ಕಟ್ಟುವ ಪ್ರಯತ್ನ ಮತ್ತು ಪರಿವರ್ತನೆಗೆ ಒತ್ತು ನೀಡಿದರು. ಆನಂತರ ವಚನಪರಂಪರೆಯಲ್ಲಿ ಜನಸಮಾನ್ಯರೊಂದಿಗೆ ಸಂವಹನಕ್ಕೆ ತೊಡಗಲು ಸಾಧ್ಯವಾಯಿತು. ಇದ–ರಿಂದ ಸಾಹಿತ್ಯ ಸಂಸ್ಕೃತಿಯಲ್ಲಿ ಅಪಾರ ಬದಲಾವಣೆ ಉಂಟಾಯಿತು. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಆಧ್ಯಾತ್ಮ, ಲೌಕಿಕತೆಯಿಂದ ಸಾಧ್ಯ ಎಂದು ನಂಬಿದ ವಚನಕಾರರು ಸಮಾನತೆಯ ಕಲ್ಪನೆಯನ್ನು ಸಮಾಜ–ಕ್ಕೆ ತೋರಿಸಿಕೊಟ್ಟರು. ದಾಸರ ಸಾಹಿತ್ಯವು ಲೌಕಿಕ ಬದುಕನ್ನು ಮತ್ತಷ್ಟು ಉತ್ತಮವಾಗಿಸಲು ದೇವರು, ದೇವಾಲಯಗಳ ಕುರಿತು ತಿಳಿಸುವ ಕಾರ್ಯಮಾಡಿದರು. ಕನಕದಾಸರು ಸಾಮಜದಲ್ಲಿನ ಮನಸ್ಥಿತಿಗಳ ಬಗ್ಗೆ ತಿಳಿಸುವ ಕಾರ್ಯಮಾಡಿದರು. ನಂತರ ನವೋದಯದಲ್ಲಿ ಹೊಸತನ, ವೈಚಾರಿಕವಾಗಿ ಸಾಕಷ್ಟು ಬದಲಾವಣೆಯಾಗಿದೆ. ಉದಾರವಾದ, ರಾಷ್ಟ್ರೀಯವಾದ, ಸಾಮಾಜಿಕವಾದ ಹೆಚ್ಚು ಅಬಿವೃದ್ಧಿಗೊಂಡಿದೆ. ನವ್ಯ ಸಾಹಿತ್ಯದಲ್ಲಿ ಪ್ರತಿಯೊಬ್ಬ ಕವಿಗಳು ಹೊಸವಿಚಾರಗಳಿಗೆ ಒತ್ತುನೀಡಿ ಉತ್ತಮ ಅಂಶಗಳ ಬೆಳವಣಿಗೆಗೆ ಸಾಹಿತ್ಯದಲ್ಲಿ ಶ್ರಮಿಸಿದ್ದಾರೆ. ಪ್ರಸ್ತುತ ದಲಿತ ಸಾಹಿತ್ಯ, ಸ್ತ್ರೀವಾದ ಹೀಗೆ ಕನ್ನಡ ಸಾಹಿತ್ಯ ಬೃಹತ್ ಪ್ರಮಾಣದಲ್ಲಿದ್ದು ಅದನ್ನು ಅನುಸಂಧಾನಕ್ಕೆ ಒಳಪಡಿಸುವುದರಿಂದ ಸಾಹಿತ್ಯವನ್ನು ವಿಭಿನ್ನ ನೆಲೆಯಲ್ಲಿ ನೋಡಲು ಸಾಧ್ಯವಿದೆ ಎಂದು ತಿಳಿಸಿದರು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಪ್ರೀತಿ ಶ್ರೀಮಂಧರ ಕುಮಾರ್ ಮಾತನಾಡಿ ಕನ್ನಡ ಸಾಹಿತ್ಯ ಸಾಂಸ್ಕೃತಿ–ಕ ಅನುಸಂಧಾನ ಪಠ್ಯದ ಆಚೆಗಿನ ವಿಸ್ತೀರ್ಣವನ್ನು ಒಳಗೊಂಡಿದೆ. ಶಿಬಿರದಲ್ಲಿ ಸಾಹಿತ್ಯವು ವಿಮರ್ಶೆಗೆ ಒಳಪಡುವುದಲ್ಲದೇ ಅದು ವಿಸ್ತರಣೆಯಾಗಬೇಕು. ಕನ್ನಡ ಸಾಹಿತ್ಯದ ಸಂಪೂರ್ಣ ಅಧ್ಯಯನವು ಸವಾಲಿನ ಕಾರ್ಯ. ಈ ಸಂದರ್ಭದಲ್ಲಿ ಲಭ್ಯವಾಗುವ ಮಾಹಿತಿಯನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಸತ್ಯದ ಹುಡುಕಾಟವಾಗಿದ್ದು ಬೌದ್ಧಿಕವಾಗಿ ನಡೆಯುವ ಕ್ರಿಯೆ ಎಂದು ತಿಳಿಸಿದರು.

ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ನಿರ್ದೇಶಕಿ ಪ್ರೊ. ಮಿಡತಲ ರಾಣಿ, ಸಂಯೋಜಕಿ ಡಾ. ವಿಜಯಕುಮಾರಿ ಎಸ್. ಕರಿಕಲ್ ಉಪಸ್ಥಿತರಿದ್ದರು.



ರಾತ್ರಿಯ ವಿದ್ಯುತ್ ಬೆಳಕಿನ ಕಿರಣಗಳಲ್ಲಿ ಗಂಗೋತ್ರಿಯ ಗಡಿಯಾರ

## ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಉದ್ಘಾಟನೆಗೆ ಉಪರಾಷ್ಟ್ರಪತಿ ಆಗಮನ :ಪ್ರೊ.ಧನಂಜಯ

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯವನ್ನು ಉಪ ರಾಷ್ಟ್ರಪತಿ ಎಂ.ಹಮೀದ್ ಅನ್ಸಾರಿ ಉದ್ಘಾಟಿಸಲಿದ್ದಾರೆ ಎಂದು ತಾಂತ್ರಿಕ ಶಿಕ್ಷಣ ವಿಭಾಗದ ಸಲೆಹಗಾರ ಪ್ರೊ.ಧನಂಜಯ ತಿಳಿಸಿದರು.

ಅವರು ಬುಧವಾರ ಸುದ್ದಿಗೋಷ್ಟಿಯನ್ನುದ್ದೇಶಿಸಿ ಮಾತನಾಡಿದ ಅವರು, ಜೆಎಸ್‌ಎಸ್ ಮಹಾವಿದ್ಯಾಪೀಠ ಆರಂಭಿಸುತ್ತಿರುವ ಎರಡನೇ ವಿಶ್ವವಿದ್ಯಾನಿಲಯ ಇದಾಗಿದ್ದು, ನಗರದಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾನಿಲಯ ಪ್ರಥಮ ವಿಶ್ವವಿದ್ಯಾನಿಲಯವಾಗಿದೆ ಎಂದು ಹೇಳಿದರು.

ಜು.23ರ ಬೆಳಿಗ್ಗೆ 11 ಗಂಟೆಗೆ ಜೆಎಸ್‌ಎಸ್ ತಾಂತ್ರಿಕ ಸಂಸ್ಥೆಗಳ ಆವರಣದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಅಧ್ಯಕ್ಷತೆಯನ್ನು ರಾಜ್ಯಪಾಲ ವಜೂಬಾಯಿ ರೂಢಬಾಯಿ ವಾಲಾ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಉನ್ನತ ಶಿಕ್ಷಣ ಮಂತ್ರಿ ಬಸವರಾಜ ರಾಯರೆಡ್ಡಿ, ಸಂಸದ ಪ್ರತಾಪ್ ಸಿಂಹ, ಶಾಸಕ ವಾಸು, ಮಹಾನಗರ ಪಾಲಿಕೆ ಮಹೌಪೌರರಾದ ಬಿ.ಎಲ್.ಭೈರಪ್ಪ ಆಗಮಿಸುವರು ಎಂದು ತಿಳಿಸಿದರು.

ಈ ವಿಶ್ವವಿದ್ಯಾನಿಲಯವು ಅಂತರಾಷ್ಟ್ರೀಯ ಮಟ್ಟದ ಸಹಯೋಗ ಹೊಂದುವ ಗುರಿ ಹೊಂದಿದ್ದು, ಈ ಸಹಯೋಗದಿಂದಾಗುವ ಉಪಯುಕ್ತತೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಪಸರಿಸಿ ಆಯಾಯ ಕ್ಷೇತ್ರಗಳಲ್ಲಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಧ್ಯೇಯ ಹೊಂದಿರುವುದಾಗಿ ತಿಳಿಸಿದರು.

ವಿಶ್ವವಿಧ್ಯಾನಿಲಯವು ವಿಶ್ವಾದಾದ್ಯಂತ ಸಂಪರ್ಕ ಬೆಳೆಸಿ ತನ್ನ ಅಸಾಧಾರಣ ಬೌದ್ಧಿಕ ಮತ್ತು ಆಯೋಜಿಕ ಶಕ್ತಿಯನ್ನು ಸಮರ್ಪಕವಾಗಿ ಬಳಸಿ, ಉನ್ನತ ಗುಣಮಟ್ಟದ ಬೋಧಕ ಶೈಲಿ ಮತ್ತು ಸಂಶೋಧನೆಗಳಿಗೆ ಹೆಚ್ಚಿನ ಆಧ್ಯತೆ




ನೀಡಲಾಗುವುದೆಂದು ತಿಳಿಸಿದರು.

ಈಗಾಗಲೇ 10 ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಮಾತುಕತೆ ನಡೆಸಲಾಗಿದೆ. ಕೈಗಾರಿಕೆಗಳು ಹೊಂದಿರುವ ನಿರೀಕ್ಷೆ ಮಟ್ಟದಲ್ಲಿ ತನ್ನ ಪಠ್ಯಕ್ರಮವನ್ನು ಬದಲಾಯಿಸುವ ಹಾಗೂ ಇದಕ್ಕೆ ಪೂರಕವಾಗಿರುವಂತೆ ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭಿಸುವ ಯೋಜನೆ ಹೊಂದಿರುವುದಾಗಿ ತಿಳಿಸಿದರು.

ಈಗಾಗಲೇ 12 ಪದವಿ ಕೋರ್ಸ್‌ಗಳಿದ್ದು, ಎಂ.ಸಿ.ಎ ಮತ್ತು ಎಂ.ಬಿಎ. ಸೇರಿದಂತೆ 16 ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಲಭ್ಯವಿದೆ. ಕಾರ್ಪೋರೇಟ್ ಫೈನಾನ್ಸ್‌ನ್ನು ನೂತನವಾಗಿ ಪ್ರಾರಂಭಸಿಲಾಗುತ್ತಿದೆ ತಿಳಿಸಿದರು.

105 ಕೋಟಿ ವೆಚ್ಚದದಲ್ಲಿ 30 ಸಾವಿರ ಚ.ಮೀ.ವಿಸ್ತೀರ್ಣದಲ್ಲಿ ಬ್ಲಾಕ್ ನಿರ್ಮಾಣ ಮಾಡಲಾಗುತ್ತಿದ್ದು, 6 ವಿಭಾಗಗಳನ್ನು ಹೊಂದಿರಲಿದೆ.ಒಂದೂವರೆ ವರ್ಷದೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ ಎಂದು ತಿಳಿಸಿದರು..

**– ರವಿಕುಮಾರ್.ಡಿ**